# ಹಂಪಿ ಟೈಮ್ಸ್

HAMPI TIMES
KANNADA DAILY
ಕನ್ನಡ ದಿನಪತ್ರಿಕೆ

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA

epaper.hampitimes.com | e-mail: hampitimes@gmail.com | M:94486 33038 Reg.No.PMG/KA/NK/BLY/01/2024-2026

ಸಂಪುಟ:02 • ಸಂಚಿಕೆ: 290 • ಪಿ.ಆರ್.ಜಿ.ಐ.ನಂ.:KARKAN/2023/88055 • ವಿಜಯನಗರ • 28.05.2025 • ಬುಧವಾರ • ಪುಟ:04 • ಬೆಲೆ:2
Volume:02 • Issue: 290 • PRGI No:KARKAN/2023/88055 • VIJAYANAGARA • 28.05.2025 • Wednesday • Page:04 • Rs:2







> ಮನಸ್ಸು ಎಲ್ಲದಕ್ಕೂ ಮೂಲ,
> ಅದನ್ನು ಸರಿಪಡಿಸಿಕೊಳ್ಳದ ಹೊರತು
> ಇನ್ನಾವುದು ಸರಿಯಾಗದು
> – ಡಿ.ವಿ.ಜಿ

**ದೇವಾಲಯ ದರ್ಶನ**



ಹಂಪಿ ಶ್ರೀ ವಿರೂಪಾಕ್ಷೇಶ್ವರ ದರ್ಶನ

ನಿತ್ಯ ಅಭಿಷೇಕ ಸಮಯ
ಬೆಳಿಗ್ಗೆ: 6:30, 10:30 ಸಂಜೆ 6:30ಕ್ಕೆ

–: ದರ್ಶನ ಸಮಯ :–
ಬೆಳಿಗ್ಗೆ 6.30 ರಿಂದ ಮಧ್ಯಾಹ್ನ 1.15ರವರೆಗೆ
ಮಧ್ಯಾಹ್ನ 3 ರಿಂದ ರಾತ್ರಿ 7.30ರವರೆಗೆ






# ಪೌರಕಾರ್ಮಿಕರ ಮುಷ್ಕರ ಜನ ತತ್ತರ

## ಸ್ವಚ್ಛತೆಗೆ ರಸ್ತೆಗಿಳಿಯದ ಕಾರ್ಮಿಕರು | ಕಸದ ವಾಹನಗಳಿಗೆ ಕಾದು ಸುಸ್ತಾದ ಹೋಟೆಲ್ ಉದ್ಯಮಿಗಳು, ಗೃಹಿಣಿಯರು

## ಹೊಪಸೇಟೆ ನಗರಸಭೆ ಜನರಿಲ್ಲದೇ ಬಿಕೋ, ಸೇವೆಯಲ್ಲೂ ವ್ಯತ್ಯಯ | ಕಚೇರಿ ಸೇವೆ ದೊರೆಯದೆ ಹಿಂದಿರಿಗಿದ ಸಾರ್ವಜನಿಕರು

■ **ಹಂಪಿ ಟೈಮ್ಸ್ ಹೊಸಪೇಟೆ**

ನಗರಸಭೆ ಪೌರಕಾರ್ಮಿಕರು ವಿವಿಧ ಬೇಡಿಕೆ ಈಡೇರಿಕೆಗೆ ಒತ್ತಾಯಿಸಿ ಮಂಗಳವಾರ ನೀರು ಪೂರೈಕೆ ಹೊರತುಪಡಿಸಿ ಇನ್ನುಳಿದ ಸೇವೆಗಳನ್ನು ಸ್ಥಗಿತಗೊಳಿಸಿ ಅನಿರ್ಧಾಷ್ಠಾವಧಿ ಮುಷ್ಕರದಲ್ಲಿ ಭಾಗವಹಿಸಿದರು. ಪೌರಕಾರ್ಮಿಕರ ನ್ಯಾಯಯುತ ಬೇಡಿಕೆಗೆ ಹೊರಗುತ್ತಿಗೆ ನೌಕರರು ಹಾಗೂ ನೌಕರರು ಮುಷ್ಕರದಲ್ಲಿ ಪಾಲ್ಗೊಂಡು ಬೆಂಬಲಿಸಿದರು. ಸದಾ ಜನರಿಂದ ಗಿಜುಗುಡುತ್ತಿದ್ದ ನಗರಸಭೆ ಕಚೇರಿ ಆವರಣವು ಮೌನಕ್ಕೆ ಜಾರಿತ್ತು. ಕಚೇರಿಯ ಸೀಲಿಂಗ್ ಫ್ಯಾನ್‌ಗಳು ಸಹ ಕಾರ್ಮಿಕರ ಬೆಂಬಲಕ್ಕೆ ಸಾಥ್ ನೀಡಿದಂತೆ ಕಂಡುಬಂದವು. ನಗರದ ರಸ್ತೆಗಳಲ್ಲಿ ತ್ಯಾಜ್ಯ ತೆರವುಗೊಳಿಸಿ, ರಸ್ತೆಗಳನ್ನು ಸ್ವಚ್ಛಗೊಳಿಸಿತ್ತಿದ್ದ ಪೌರಕಾರ್ಮಿಕರು ಮುಷ್ಕರದಲ್ಲಿ ತೊಡಗಿದ್ದರಿಂದ ಪ್ರವಾಸಿ ಕೇಂದವಾಗಿರುವ ಹೊಸಪೇಟೆ ಪ್ರಮುಖ ರಸ್ತೆಗಳಲ್ಲಿ ಕಸದ ರಾಶಿಗಳು, ಅಶುಚಿತ್ವ ಜನರ ಕಣ್ಣಿಗೆ ರಾಚುತ್ತಿದ್ದವು. ಜನರು ಕಸದ ವಾಹನಕ್ಕಾಗಿ ಕಸ ಹಿಡಿದು ಕಾದು ಸುಸ್ತಾದರು. ಇನ್ನು ಹೋಟೇಲ್‌ಗಳಲ್ಲಿ ಸಂಗ್ರಹವಾಗುವ ನಿತ್ಯದ ತ್ಯಾಜ್ಯ ಸಂಗ್ರಹಿಸಿಟ್ಟುಕೊಳ್ಳಲಾಗದೇ, ಹೊರಹಾಕಲಾರದೆ ಪರದಾಡಿದರು. ಜಿಲ್ಲೆ ಸೇರಿದಂತೆ ರಾಜ್ಯಾದ್ಯಂತ ಪೌರಕಾರ್ಮಿಕರು ನಡೆಸುತ್ತಿರುವ ಮುಷ್ಕರಕ್ಕೆ ಬೆಂಬಲ ವ್ಯಕ್ತಿವಾಗಿದೆ. ಕರ್ನಾಟಕ ರಾಜ್ಯ ನೌಕರರ ಸಂಘದ ರಾಜ್ಯಧ್ಯಕ್ಷರು ಸಿಎಂ ಜೊತೆ ಮೊದಲ ಸುತ್ತಿನ ಮಾತುಕತೆ ನಡೆದಿದ್ದು, ಫಲಪ್ರದವಾಗಿಲ್ಲ. ಮುಷ್ಕರವನ್ನು ಹಿಂತೆದುಕೊಳ್ಳಿ ಎಂದು ಸಿಎಂ ತಿಳಿಸಿದ್ದಾರೆ. ಆದರೆ ಸರ್ಕಾರ ಪೌರಕಾರ್ಮಿಕರ ಬೇಡಿಕೆ ಈಡೇರಿಸುವ ಭರವಸೆ ನೀಡುವವರೆಗೂ ಪ್ರತಿಭಟನೆಯಿಂದ ಹಿಂದೆ ಸರಿಯುವುದಿಲ್ಲ ಎಂಬ ತೀರ್ಮಾನಕ್ಕೆ ಪೌರಕಾರ್ಮಿಕರು ಬಂದಿದ್ದೇವೆ. ಬೇಡಿಕೆ ಈಡೇರಿಸುವವರೆಗೂ ಹಗಲು–ರಾತ್ರಿಯೂ ಪ್ರತಿಭಟನೆ ಮುಂದುವರೆಯಲಿದೆ ಎಂದು ರಾಜ್ಯ ಪೌರಕಾರ್ಮಿಕರ ಸಂಘದ ಹೊಸಪೇಟೆ ನಗರಸಭೆ ಶಾಖೆಯ ಅಧ್ಯಕ್ಷ ಬಿ.ಎಂ.ನಾಗೇಂದ್ರ ವರ್ಮ ತಿಳಿಸಿದ್ದಾರೆ.

ಜನನ–ಮರಣ ಪ್ರಮಾಣಪತ್ರ ಮತ್ತು ನಮೂನೆ–3 ಫಾರಂ ಪಡೆಯುವುದು ಸೇರಿದಂತೆ ನಗರಸಭೆಯ ಕಾರ್ಯಗಳಲ್ಲೂ ವ್ಯತ್ಯಯವಾಗಿದ್ದರಿಂದ ಜನರು ಕಚೇರಿಗೆ ಆಗಮಿಸಿ ಬರಿಗೈಯಲ್ಲಿ ಹಿಂತಿರುಗಿದರು.







> ನಗರಸಭೆ ವ್ಯಾಪ್ತಿಯಲ್ಲಿ ನೀರು ಪೂರೈಕೆ ಹೊರತುಪಡಿಸಿ ಇನ್ನುಳಿದ ಪೌರಕಾರ್ಮಿಕರ ಸೇವೆಗಳಲ್ಲಿ ವ್ಯತ್ಯಯವಾಗಿದೆ. ಹೋರಾಟ ರಾತ್ರಿಯೂ ಮುಂದುವರೆದಿದೆ. ನಮ್ಮ ನ್ಯಾಯಯುತ ಹೋರಾಟಕ್ಕೆ ಜನರು ಸಹಕರಿಸಬೇಕು. ಸರ್ಕಾರ ನಮ್ಮ ಬೇಡಿಕೆಗೆ ಸ್ಪಂದಿಸಿ ಸೇವೆಗೆ ಅವಕಾಶ ಕಲ್ಪಿಸಬೇಕು.
> – ಬಿ.ಎಂ.ನಾಗೇಂದ್ರ ವರ್ಮ,
> ಅಧ್ಯಕ್ಷ, ಪೌರಕಾರ್ಮಿಕರ ಸಂಘ, ಹೊಸಪೇಟೆ

## ಅಪ್ರಾಪ್ತ ಬಾಲಕಿ ಮೇಲೆ ಅತ್ಯಾಚಾರ, ಆರೋಪಿ ನಾಗರಾಜ ಬಂಧನ

**ಹಂಪಿ ಟೈಮ್ಸ್ ಮರಿಯಮ್ಮನಹಳ್ಳಿ**

ಮರಿಯಮ್ಮನಹಳ್ಳಿ ವ್ಯಾಪ್ತಿಯ ಗ್ರಾಮದಲ್ಲಿ ಅಪ್ರಾಪ್ತ ಬಾಲಕಿ ಮೇಲೆ ಯುವಕನೊರ್ವ ಅತ್ಯಾಚಾರ ಎಸಗಿದ ಘಟನೆ ಬೆಳಕಿಗೆ ಬಂದಿದ್ದು, ಮರಿಯಮ್ಮನಹಳ್ಳಿ ಪೊಲೀಸ್ ಠಾಣೆಯಲ್ಲಿ ಪೋಕ್ಸೊ ಕಾಯ್ದೆ ಅಡಿಯಲ್ಲಿ ಪ್ರಕರಣ ದಾಖಲಾಗಿದೆ.

ನಾಗರಾಜ (37) ವರ್ಷ ಅತ್ಯಾಚಾರ ಎಸಗಿದ ಆರೋಪಿ ಎಂದು ಗುರುತಿಸಲಾಗಿದೆ. ಬಾಲಕಿಯು ರಾತ್ರಿ ಸಮಯದಲ್ಲಿ ಮೂತ್ರ ವಿಸರ್ಜನೆಗೆಂದು ಮನೆಯಿಂದ ಹೊರಗಡೆ ಬಂದಾಗ, ಆರೋಪಿಯು ಅದನ್ನು ಗಮನಿಸಿ ರಸ್ತೆಯ ಪಕ್ಕದಲ್ಲಿರುವ ನೀರಿನ ಟ್ಯಾಂಕ್ ಹತ್ತಿರ ಕರೆದೊಯ್ದು ಅತ್ಯಾಚಾರವೆಸಗಿದ್ದಾನೆ ಎಂದು ತಿಳಿದು ಬಂದಿದೆ. ಪಟ್ಟಣದ ಪೊಲೀಸರು ಆರೋಪಿಯನ್ನು ಬಂಧಿಸಿ ಆರೋಪಿಯ ಮೇಲೆ ಪೋಕ್ಸೋ ಕಾಯ್ದೆಯಡಿ ಮೊಕದ್ದಮೆ ದಾಖಲಿಸಿ, ಅರೋಪಿಯನ್ನು ನ್ಯಾಯಾಲಯಕ್ಕೆ ಒಪ್ಪಿಸಿದ್ದಾರೆ. ವಿಜಯನಗರ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಬಿಎಲ್.ಶ್ರೀಹರಿಬಾಬು, ಕೂಡ್ಲಿಗಿ ಡಿವೈಎಸ್ಪಿ ಮಲ್ಲೇಶ್ ದೊಡ್ಡಮನಿ, ಹಗರಿ ಬೊಮ್ಮನಹಳ್ಳಿ ಸಿಪಿಐ ವಿಕಾಸ್ ಲಮಾಣಿ, ಪಟ್ಟಣದ ಪಿಎಸ್‌ಐ ತಾರಾಬಾಯಿ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದರು.

## ಅನ್ಯಭಾಷಿಕರಿಗೆ ಕನ್ನಡ ಕಲಿಸುವ ತರಬೇತಿ : ಅರ್ಜಿ ಆಹ್ವಾನ

**ಹಂಪಿ ಟೈಮ್ಸ್ ಬಳ್ಳಾರಿ**

ಜಿಲ್ಲೆಯಲ್ಲಿರುವ ಕೇಂದ್ರೋದ್ಯಮಗಳು, ಬ್ಯಾಂಕ್‌ಗಳು, ಕೇಂದ್ರ ಸರ್ಕಾರಿ ಕಚೇರಿಗಳು, ವಸತಿ ಸಮುಚ್ಚಯಗಳಲ್ಲಿರುವ ಕನ್ನಡೇತರರು, ಅನ್ಯಭಾಷಿಕರಿಗೆ ಕನ್ನಡ ಕಲಿಸುವ ತರಬೇತಿ ನೀಡಲಾಗುತ್ತಿದ್ದು, ಆಸಕ್ತರು ಅರ್ಜಿ ಸಲ್ಲಿಸಿ ನೋಂದಾಯಿಸಿಕೊಳ್ಳಬಹುದು ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಬಿ.ನಾಗರಾಜ ಅವರು ತಿಳಿಸಿದ್ದಾರೆ.

ಕನ್ನಡ ಅಭಿವೃದ್ಧಿ ಪ್ರಾಧಿಕಾರ ವತಿಯಿಂದ ಕನ್ನಡೇತರರಿಗೆ ಕನ್ನಡ ಕಲಿಸುವ ಪ್ರಯತ್ನವನ್ನು ಹಲವು ವರ್ಷಗಳಿಂದ ನಿರಂತರವಾಗಿ ಕೈಗೊಳ್ಳುತ್ತಿದ್ದು, 2025–26ನೇ ಸಾಲಿನಲ್ಲಿ ಇನ್ನಷ್ಟು ವ್ಯಾಪಕಗೊಳಿಸಲು ಪ್ರಾಧಿಕಾರವು ವೈಜ್ಞಾನಿಕ ಪಠ್ಯಕ್ರಮವನ್ನು ರೂಪಿಸಿ ತರಬೇತಿ ಹೊಂದಿದ ಶಿಕ್ಷಕರನ್ನು ಆಯೋಜಿಸುವ ಮೂಲಕ ವೃತ್ತಿಪರತೆಯನ್ನು ಒದಗಿಸಲಿದೆ. ಕನ್ನಡ ಕಲಿಸುವ ತರಬೇತಿಯನ್ನು 3 ತಿಂಗಳ ಅವಧಿಯಲ್ಲಿ ವಾರಕ್ಕೆ 3 ದಿನದಂತೆ ಪ್ರತಿದಿನ 01 ಗಂಟೆ ತರಬೇತಿಯನ್ನು ನಗರದ ಡಾ. ರಾಜ್‌ಕುಮಾರ್ ರಸ್ತೆಯ ಸಾಂಸ್ಕೃತಿಕ ಸಮುಚ್ಚಯದ ಹೊಂಗಿರಣ ಸಭಾಂಗಣದಲ್ಲಿ ನೀಡಲಾಗುತ್ತದೆ. ಆಸಕ್ತ ಕನ್ನಡೇತರರು ತಮ್ಮ ಸ್ವ–ವಿವರದೊಂದಿಗೆ ಜೂ.06 ರೊಳಗಾಗಿ ಅರ್ಜಿಯನ್ನು ಡಾ.ರಾಜ್‌ಕುಮಾರ್ ರಸ್ತೆಯ ಸಾಂಸ್ಕೃತಿಕ ಸಮುಚ್ಚಯದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರ ಕಚೇರಿಗೆ ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗಾಗಿ ಕಚೇರಿಯ ದೂ.08392–275182 ಗೆ ಸಂಪರ್ಕಿಸಬಹುದು ಎಂದು ತಿಳಿಸಿದ್ದಾರೆ.

### ಜಿಲ್ಲಾ ಮಟ್ಟದ ಸಮನ್ವಯ ಸಮಿತಿ ಸಭೆ | ಡಿಸಿ ಪ್ರಶಾಂತ್ ಕುಮಾರ್ ಮಿಶ್ರಾ ಸೂಚನೆ

## ಜನನ–ಮರಣ ದಾಖಲೆ ಸಕಾಲದೊಳಗೆ ವಿತರಿಸಿ




■ **ಹಂಪಿ ಟೈಮ್ಸ್ ಬಳ್ಳಾರಿ**

ಜಿಲ್ಲೆಯಲ್ಲಿ ಗ್ರಾಮೀಣ ಹಾಗೂ ನಗರ ಪ್ರದೇಶಗಳಲ್ಲಿ ಜನನ ಮತ್ತು ಮರಣ ನೋಂದಣಿ ಪ್ರಕ್ರಿಯೆಯು ಯಾವುದೇ ಕಾರಣಕ್ಕೂ ವಿಳಂಬವಾಗದೇ ನಿಗದಿತ ಸಮಯದಲ್ಲಿ ಜರುಗಬೇಕು ಎಂದು ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ ಅವರು ಹೇಳಿದರು.

ನಗರದ ಜಿಲ್ಲಾಧಿಕಾರಿಗಳ ಕಚೇರಿಯ ಕೆಸ್ವಾನ್ ವಿಡಿಯೋ ಸಭಾಂಗಣದಲ್ಲಿ ಮಂಗಳವಾರ ಏರ್ಪಡಿಸಿದ್ದ ಬೆಳೆ ಕಟಾವು ಪ್ರಯೋಗಗಳ ಪ್ರಗತಿ ಪರಿಶೀಲನೆ, ಬೆಳೆ ಕ್ಷೇತ್ರ ಮರು ಹೊಂದಾಣಿಕೆ ಮತ್ತು ಜನನ–ಮರಣ ನಾಗರೀಕ ನೋಂದಣಿ ಪದ್ಧತಿಯ ಕುರಿತ ಜಿಲ್ಲಾ ಮಟ್ಟದ ಸಮನ್ವಯ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಜಿಲ್ಲೆಯಲ್ಲಿ ಜನನ ಘಟನೆಗಳ ಪ್ರಮಾಣವು ವಾರ್ಷಿಕ ಅಂದಾಜು 30 ಸಾವಿರವಿದೆ. ಪ್ರತಿ ತಿಂಗಳು, ಪ್ರತಿ ಆಸ್ಪತ್ರೆಗಳಲ್ಲಿ ಎಷ್ಟು ಜನನ ಘಟನೆಗಳು ಸಂಭವಿಸುತ್ತಿವೆ ಹಾಗೂ ಎಷ್ಟು ಮಂದಿ ಜನನ ಪ್ರಮಾಣ ಪಡೆದುಕೊಳ್ಳುತ್ತಿದ್ದಾರೆ ಎಂಬುದನ್ನು ಪರಿಶೀಲಿಸಿ, ಮಾಹಿತಿ ಸಂಗ್ರಹಿಸಬೇಕು. ಈ ಕುರಿತು ಆಯಾ ತಾಲ್ಲೂಕು ತಹಶೀಲ್ದಾರರ ನೇತೃತ್ವದಲ್ಲಿ ತಾಲೂಕು ಮಟ್ಟದ ಜನನ ಮತ್ತು ಮರಣ ಸಮನ್ವಯ ಸಮಿತಿ ಸಭೆಗಳನ್ನು ನಿಯಮಿತವಾಗಿ ಜರುಗಿಸಬೇಕು ಎಂದು ಜಿಲ್ಲಾಧಿಕಾರಿಗಳು ನಿರ್ದೇಶನ ನೀಡಿದರು.

ಅದೇರೀತಿಯಾಗಿ ಮರಣ ಘಟನೆಗಳನ್ನು ಹೇಗೆ ಗಣತಿ ಮಾಡುತ್ತೀರಿ ಎಂದು ವಿಚಾರಿಸಿದ ಜಿಲ್ಲಾಧಿಕಾರಿಗಳು, ಮರಣ ಘಟನೆಗಳು ಕೇವಲ ಆಸ್ಪತ್ರೆಗಳಲ್ಲಿ ಸಂಭವಿಸಿದರೆ ಗೊತ್ತಾಗುತ್ತದೆ, ಆದರೆ ಸಮುದಾಯದಲ್ಲಿ ನಡೆದ ಮರಣ ಘಟನೆಗಳನ್ನು ಸಹ ತಪ್ಪದೇ ಗಣತಿ ಮಾಡಬೇಕು ಎಂದು ಸಂಬಂಧಿಸಿದ ಅಧಿಕಾರಿಗಳಿಗೆ ಸೂಚಿಸಿದರು.

ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿ ಎನ್.ಕೆ.ಪತ್ರಿಬಸಪ್ಪ ಮಾತನಾಡಿ, 2025 ರ ಜನವರಿಯಿಂದ ಏಪ್ರಿಲ್ ರವರೆಗೆ ಜಿಲ್ಲೆಯಲ್ಲಿ ಜನನ ನೋಂದಣಿ ವಿವರ ಕುರಿತಂತೆ ಗಂಡು–4,827, ಹೆಣ್ಣು–4,361 ಸೇರಿ ಒಟ್ಟು 9,188 ಘಟನೆಗಳು ನೋಂದಣಿಯಾಗಿವೆ. ಅದೇರೀತಿಯಾಗಿ 2025 ರ ಜನವರಿಯಿಂದ ಏಪ್ರಿಲ್ ರವರೆಗೆ ಜಿಲ್ಲೆಯಲ್ಲಿ ಮರಣ ನೋಂದಣಿ ವಿವರ ಕುರಿತಂತೆ ಗಂಡು–2,608, ಹೆಣ್ಣು–1,775 ಮತ್ತು ಲಿಂಗತ್ವ ಅಲ್ಪಸಂಖ್ಯಾತರು–1 ಸೇರಿದಂತೆ ಒಟ್ಟು 4,384 ಘಟನೆಗಳು ನೋಂದಣಿಯಾಗಿವೆ ಎಂದು ಸಭೆಗೆ ತಿಳಿಸಿದರು.

ಜನನ ಘಟನೆಗಳು 21 ದಿನಗಳೊಳಗಾಗಿ ಸಂಭವಿಸಿದ್ದರೆ ಉಚಿತವಾಗಿ ಪ್ರಮಾಣ ಪತ್ರ ಪಡೆಯಬಹುದು. ಘಟನೆ ಸಂಭವಿಸಿ 21 ದಿನದಿಂದ 30 ದಿನಗಳೊಳಗಿದ್ದರೆ ಪ್ರಮಾಣ ಪತ್ರ ಪಡೆಯಲು ರೂ.20 ಪಾವತಿಸಬೇಕು. 30 ದಿನಗಳ ನಂತರ ಪಡೆಯುವಂತಿದ್ದಲ್ಲಿ ರೂ.50 ಪಾವತಿಸಬೇಕು ಎಂದು ಮಾಹಿತಿ ತಿಳಿಸಿದರು.

>>4

## ಶ್ರೀಶನೇಶ್ವರಗೆ ವಿಶೇಷ ಪೂಜೆ

### ನಾಡಿನ ವಿವಿಧೆಡೆಗಳಿಂದ ಬಂದ ಭಕ್ತರು

■ **ಹಂಪಿ ಟೈಮ್ಸ್ ಹೊಸಪೇಟೆ**



ನಗರದ ಹೊರವಲಯದ ಪಂಚಾಚಾರ್ಯನಗರದಲ್ಲಿರುವ ಶ್ರೀಶನೇಶ್ವರ ದೇವಸ್ಥಾನದಲ್ಲಿ ಶ್ರೀ ಶನೇಶ್ವರ ಜಯಂತಿ ನಿಮಿತ್ತ ಮಂಗಳವಾರ ವಿಶೇಷ ಪೂಜೆಗಳು ಜರುಗಿದವು.

ಬೆಳಿಗ್ಗೆ ಶ್ರೀ ಶನೇಶ್ವರ ಶ್ರೀಸ್ವಾಮಿ ಉತ್ಸವ ಮೂರ್ತಿಯೊಂದಿಗೆ ಗಂಗಾ ಸ್ಥಳಕ್ಕೆ ತೆರಳಿ, ಗಂಗಾಪೂಜೆ ನೆರವೇರಿಸಿ ಗಂಗೆಯೊಂದಿಗೆ ಜಾನಪದ ಕಲಾ ತಂಡ, ಸಮಾಳ, ನಂದಿಕೋಲು, ವಾದ್ಯ ಸಂಗೀತಗೊಂದಿಗೆ ದೇವಸ್ಥಾನಕ್ಕೆ ಮರಳಿದರು. ನಂತರ ಅರ್ಚಕರಿಂದ ತೈಲಾಭಿಷೇಕ, ರುದ್ರಾಭಿಷೇಕ, ಪಂಚಾಮೃತ ಅಭಿಷೇಕ, ವಿವಿಧ ಪುಷ್ಪ, ಬೆಳ್ಳಿ ಆಭರಣದೊಂದಿಗೆ ಅಲಂಕರಿಸಲಾಯಿತು. ಶ್ರೀ ವಿಘ್ನೇಶ್ವರ, ಶ್ರೀ ಶಾಂತಲಿಂಗೇಶ್ವರ, ಜೇಷ್ಠಾದೇವಿ, ಶಾಂಭವಿಮಾತೆ, ಶ್ರೀ ನಂದಿ, ನವಗ್ರಹ ಹಾಗೂ ಕಾಳಿಕಾ ದೇವಿಗೆ ವಿಶೇಷ ಪೂಜೆ ಸಲ್ಲಿಸಲಾಯಿತು. ಜಿಟಿ ಜಿಟಿ ಮಳೆಯ ನಡುವೆಯೂ ಅಪಾರ ಸಂಖ್ಯೆಯಲ್ಲಿ ಭಕ್ತರು ಬೆಳಿಗ್ಗೆಯಿಂದಲೇ ಸರತಿ ಸಾಲಿನಿಲ್ಲಿ ನಿಂತು ಸ್ವಾಮಿಯ ದರ್ಶನ ಪಡೆದು, ಪ್ರಸಾದ ಸ್ವೀಕರಿಸಿದರು. ದೇವಸ್ಥಾನ ಸಮಿತಿ ಅಧ್ಯಕ್ಷ ಬಿ.ಹಾಲನಗೌಡ ಸೇರಿದಂತೆ ಸಮಿತಿ ಸದಸ್ಯರು ಅಗತ್ಯ ವ್ಯವಸ್ಥೆ ಕಲ್ಪಿಸಿದ್ದರು. ಪೊಲೀಸರು ಸೂಕ್ತ ಭದ್ರತೆ ಒದಗಿಸಿದ್ದರು.

# ಮನುಷ್ಯನ ಒಳಿತಿಗಾಗಿ ಧಾರ್ಮಿಕ ಕಾರ್ಯಗಳು

### ಡಿಸಿ ಎಂ.ಎಸ್.ದಿವಾಕರ ಹೇಳಿಕೆ | ಚಿರಬಿ–ರಾಂಪುರ ಗ್ರಾಮಸ್ಥರ ಸಹಕಾರದಿಂದ ಅದ್ದೂರಿ ರಥೋತ್ಸವ



■ **ಹಂಪಿ ಟೈಮ್ಸ್ ಕೊಟ್ಟೂರು.**

17 ವರ್ಷಗಳಿಂದ ರದ್ದಾಗಿದ್ದ ಚಿರಿಬಿ ಶ್ರೀ ಮೂಗಬಸವೇಶ್ವರ ರಥೋತ್ಸವವನ್ನು ಈ ಬಾರಿ ಉಭಯ (ಚಿರಿಬಿ ಮತ್ತು ರಾಂಪುರ) ಗ್ರಾಮಸ್ಥರ ಸಹಕಾರ ಹಾಗೂ ಕಾನೂನು ಮಾರ್ಗದರ್ಶನದಲ್ಲಿ ಧಾರ್ಮಿಕ ದತ್ತಿ ಇಲಾಖೆ ನೇತೃತ್ವದಲ್ಲಿ ನಡೆಸುವ ಕುರಿತು ವಿಜಯನಗರದ ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ ಅವರು ಭಕ್ತರಲ್ಲಿ ಆಶಾ ಭಾವನೆ ಮೂಡಿಸಿದ್ದಾರೆ.

ಜಿಲ್ಲಾಧಿಕಾರಿ ಮಂಗಳವಾರ ಅಮವಾಸ್ಯೆ ನಿಮಿತ್ತ ಚಿರಿಬಿ ಶ್ರೀ ಮೂಗಬಸವೇಶ್ವರ ದೇವಸ್ಥಾನಕ್ಕೆ ಭೇಟಿ ನೀಡಿ ರಥ ಮತ್ತು ರಥೋತ್ಸವವು ನಡೆಯುವ ಮಾರ್ಗ ಪರಿಶೀಲಿಸಿ, ದೇವಸ್ಥಾನದ ಜಾಗವನ್ನು ಸಂಪೂರ್ಣ ಹದ್ದುಬಸ್ತು ಮಾಡುವಂತೆ ಹಾಗೂ ದೇವಸ್ಥಾನದಲ್ಲಿ ಅಭಿವೃದ್ಧಿ ಪಡಿಸುವಂತೆ, ಪ್ರತಿ ಅಮವಾಸ್ಯೆಗೆ ಭಕ್ತರಿಗೆ ಪ್ರಸಾದ್ ವ್ಯವಸ್ಥೆ ಕಲ್ಪಿಸುವಂತೆ ದತ್ತಿ ಇಲಾಖೆ ಇಒ ಹನುಮಂತಪ್ಪ ಅವರಿಗೆ ಸೂಚಿಸಿದರು.

ಇದೇ ವೇಳೆ ದೇವಸ್ಥಾನದ ವಿಚಾರವಾಗಿ ಕಾನೂನು ಮೊರೆ ಹೋಗಿದ್ದ ಚಿರಿಬಿ ಮತ್ತು ರಾಂಪುರ ಗ್ರಾಮಸ್ಥರ ಅಭಿಪ್ರಾಯವನ್ನು ಕೇಳಿ, ಮಾತನಾಡಿದ ಜಿಲ್ಲಾಧಿಕಾರಿಗಳು ಮೂಗಬಸವೇಶ್ವರ ದೇವಸ್ಥಾನವು ಧಾರ್ಮಿಕ ದತ್ತಿ ಇಲಾಖೆಯ ಸುಪರ್ಧಿಯಲ್ಲಿದ್ದು ರಥೋತ್ಸವದ ಬಗ್ಗೆ ಉಭಯ ಗ್ರಾಮಸ್ಥರು ಹಸ್ತಕ್ಷೇಪ ಮಾಡುವಂತಿಲ್ಲ, ಅಲ್ಲದೆ ತಾವು ನ್ಯಾಯಾಲಯಕ್ಕೆ ಸಲ್ಲಿಸಿರುವ ಅರ್ಜಿಯಲ್ಲಿ ರಥೋತ್ಸವ ನಡೆಸದಂತೆ ಕೋರಿಲ್ಲ. ಲಾಂಡ್ ಆರ್ಡ್ರ್ ಮೀರಬಾರದು ಎಂಬ ಕಾರಣಕ್ಕೆ ರಥವನ್ನು ರದ್ದು ಪಡಿಸಿದ್ದಾರೆ ಎಂದರು.

ಈ ವಿಚಾರವಾಗಿ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿ ಕಾನೂನು ವ್ಯಾಪ್ತಿಯಲ್ಲಿ ಆಗಸ್ಟ್ 18 ಕ್ಕೆ ರಥೋತ್ಸವವನ್ನು ನಡೆಸುವ ಬಗ್ಗೆ ಪ್ರಸ್ತಾಪಿಸಿದರು. ರಥೋತ್ಸವಗಳು ಹಾಗೂ ಧಾರ್ಮಿಕ ಕಾರ್ಯಕ್ರಮಗಳು ಮನುಷ್ಯರ ಒಳಿತಿಗಾಗಿ ನಡೆಯುತ್ತವೆ. ಇದಕ್ಕೆ ಯಾರು ಅಡ್ಡಿಯಾಗದೆ ಉಭಯ ಗ್ರಾಮಸ್ಥರು ಒಟ್ಟುಗೂಡಿ ರಾಜಿಯಾದ್ರೆ. ಉಭಯ ಗ್ರಾಮಸ್ಥರ ಸಹಕಾರದಿಂದ ಈ ಬಾರಿ ಶ್ರೀಸ್ವಾಮಿಯ ರಥೋತ್ಸವವನ್ನು ಅದ್ದೂರಿಯಾಗಿ ಆಚರಿಸೋಣ ಎಂದರು.

ಈ ವೇಳೆ ಡಾ.ಬಿ.ಸಿ ಮೂಗಪ್ಪ ಎಂಎಂಜೆ ಮೂಗಣ್ಣ, ರಾಂಪುರ ಗ್ರಾಮಸ್ಥರಾದ ಭರಮಜ್ಜ, ಬಸವನಗೌಡ ವಕೀಲರು,ಮದ್ಯಾನಪ್ಪ ವಕೀಲರು, ನಾಗಭೂಷಣ ಸೇರಿದಂತೆ ಇತರರು ಇದ್ದರು, ಚಿರಿಬಿ ಗ್ರಾಮದ ಮುಖಂಡ ವೀರಯ್ಯ, ತಾಪಂ ಸದಸ್ಯ ಗಂಗಾಧರ, ಗ್ರಾಪಂ ಸದಸ್ಯ ಪಿ.ನಾಗರಾಜ್, ಅಂಗಡಿ ಮಂಜುನಾಥ ವಕೀಲರು ಸೇರಿದಂತೆ, ತಹಶಿಲ್ದಾರ್ ಅಮರೇಶ್ ಜಿ.ಕೆ, ತಾಪಂ ಇಒ ಡಾ.ಬಿ ಆನಂದ ಕುಮಾರ್,ಕೊಟ್ಟೂರು ಠಾಣೆ ಸಿಪಿಐ ವೆಂಕಟಸ್ವಾಮಿ,ಪಿಎಸ್‌ಐ ಗೀತಾಂಜಲಿ ಸಿಂಧೆ ಇತರರು ಇದ್ದರು.

## ಮೇ 29 ರಿಂದ ವಿಕಸಿತ ಕೃಷಿ ಸಂಕಲ್ಪ ಅಭಿಯಾನ ವಿಜ್ಞಾನಿಗಳ ನಡೆ ರೈತರ ಕಡೆ

■ **ಹಂಪಿ ಟೈಮ್ಸ್ ಬಳ್ಳಾರಿ**

ನವದೆಹಲಿಯ ಭಾರತೀಯ ಕೃಷಿ ಅನುಸಂಧಾನ ಪರಿಷತ್ತು ಹಾಗೂ ಅದರ ವಿವಿಧ ಅಂಗ ಸಂಸ್ಥೆಗಳು, ಕೃಷಿ ವಿಶ್ವವಿದ್ಯಾಲಯಗಳು, ಕೃಷಿ ವಿಜ್ಞಾನ ಕೇಂದ್ರಗಳು, ಕೃಷಿ ಇಲಾಖೆ ಮತ್ತು ತೋಟಗಾರಿಕೆ ಇಲಾಖೆಯ ಸಹಯೋಗದೊಂದಿಗೆ ಈ ಮುಂಗಾರು ಹಂಗಾಮಿನಲ್ಲಿ ಕೃಷಿಕರಿಗೆ ವಿವಿಧ ಕೃಷಿ ತಾಂತ್ರಿಕತೆಗಳು ಲಭ್ಯವಾಗುವಂತೆ ಮೇ 29 ರಿಂದ ಜೂನ್ 12 ರವರೆಗೆ ವಿಕಸಿತ ಕೃಷಿ ಸಂಕಲ್ಪ ಅಭಿಯಾನ ಹಮ್ಮಿಕೊಳ್ಳಲಾಗಿದೆ.

ಕೃಷಿ ಸಂಶೋಧನೆ ಮತ್ತು ರೈತ ಸಮುದಾಯದ ನಡುವಿನ ಅಂತರವನ್ನು ಕಡಿಮೆ ಮಾಡುವುದು ಈ ಅಭಿಯಾನದ ಉದ್ದೇಶವಾಗಿದೆ. ಕೃಷಿ ಜ್ಞಾನವನ್ನು ನೇರವಾಗಿ ರೈತರ ಜಮೀನುಗಳಿಗೆ ಕೊಂಡೊಯ್ಯುವ ಮೂಲಕ ಈ ಅಭಿಯಾನವನ್ನು ಭಾರತ ಸರ್ಕಾರದ ಭಾರತೀಯ ಕೃಷಿ ಸಂಶೋಧನಾ ಅನುಸಂಧಾನ ಪರಿಷತ್‌ನ ವಿಜ್ಞಾನಿಗಳು ಹಾಗೂ ಕೃಷಿ ವಿಜ್ಞಾನ ಕೇಂದ್ರದ ವಿಜ್ಞಾನಿಗಳನ್ನು ಒಳಗೊಂಡ ಎರಡು ಮತ್ತು ಮೂರು ತಂಡಗಳ ಮೂಲಕ ಕಾರ್ಯಗತಗೊಳಿಸಲಾಗುತ್ತಿದೆ. ಇಲ್ಲಿ ರೈತರನ್ನು ಒಗ್ಗೂಡಿಸಿ ನೂತನ ತಂತ್ರಜ್ಞಾನಗಳು, ಹೊಸ ತಳಿಗಳು ಮತ್ತು ಬೀಜಗಳು, ನಿಖರವಾದ ಹವಾಮಾನದ ಮಾಹಿತಿ ಮತ್ತು ಸರ್ಕಾರದ ನಾನಾ ಲಾಭದಾಯಕ ಯೋಜನೆಗಳು, ಕೃಷಿಯಲ್ಲಿ ಹೆಚ್ಚಿನ ಲಾಭವನ್ನು ಹೇಗೆ ಪಡೆಯಬಹುದು ಎಂಬ ಬಗ್ಗೆ ಮಾಹಿತಿ ನೀಡಲಾಗುತ್ತದೆ.

ಜಿಲ್ಲೆಯ ಆಯಾ ಹೋಬಳಿಯ ರೈತ ಸಂಪರ್ಕ ಕೇಂದ್ರಗಳ ಮೂಲಕ ವಿಕಸಿತ ಕೃಷಿ ಸಂಕಲ್ಪ ಅಭಿಯಾನದ ತಂಡ ಭೇಟಿ ನೀಡುವ ಬಗ್ಗೆ ಅಲ್ಲಿಯ ರೈತರಿಗೆ ಮುಂಚಿತವಾಗಿ ಮಾಹಿತಿ ನೀಡಲಾಗುತ್ತದೆ ಎಂದು ಬಳ್ಳಾರಿಯ ಕೃಷಿ ವಿಜ್ಞಾನ ಕೇಂದ್ರದ ಹಿರಿಯ ವಿಜ್ಞಾನಿ ಹಾಗೂ ಮುಖ್ಯಸ್ಥರಾದ ಡಾ.ಪಾಲಯ್ಯ.ಪಿ ತಿಳಿಸಿದ್ದಾರೆ.

## ಸ್ಟುಡೆಂಟ್ ಕಾಲಂ

# ನನ್ನ ಪ್ರಕೃತಿ



ಪ್ರಕೃತಿ, ಈ ಪದದ ಹಿಂದೆ ಎಷ್ಟು ಸೌಂದರ್ಯ, ಎಷ್ಟು ಶಕ್ತಿ, ಎಷ್ಟು ತಾಯಿತನ ಅಡಗಿದೆ! ನಾವು ಯಾವ ಕ್ಷಣಕ್ಕೂ ವಿಶ್ರಾಂತಿ ಪಡೆದು ಬಾಳಲು ಸಾಧ್ಯವಿಲ್ಲದಂತಹ ಈ ಯಂತ್ರಯುಗದಲ್ಲಿ, ಪ್ರಕೃತಿಯ ಸಾನ್ನಿಧ್ಯ ಮಾತ್ರ ನಮ್ಮ ಮನಸ್ಸಿಗೆ ನಿಜವಾದ ಶಾಂತಿಯನ್ನು ನೀಡುತ್ತದೆ. ಗಾಳಿಯ ತಂಪು ಸ್ಪರ್ಶ, ಹನಿಯ ನದಿಮುಟ್ಟಾದ ಸರಣಿ, ಹಸಿರು ಗಿಡಗಳ ನಗು, ಇವೆಲ್ಲವೂ ನಮ್ಮ ಬದುಕನ್ನು ಸಮೃದ್ಧಗೊಳಿಸುತ್ತವೆ.

ಪ್ರತಿ ವರ್ಷ ಜೂನ್ 5 ರಂದು ವಿಶ್ವ ಪರಿಸರ ದಿನ ಆಚರಿಸಲಾಗುತ್ತದೆ. ಈ ದಿನದ ಆಚರಣೆ ಒಂದು ನೆನಪಿನ ಘಂಟೆಯಂತೆ, "ನೀವು ಪ್ರಕೃತಿಯಿಂದ ಎಷ್ಟು ಪಡೆದುಕೊಳ್ಳುತ್ತಿದ್ದೀರೋ, ಅದಕ್ಕೊಂದು ಕೊಡುಗೆಯನ್ನು ನೀಡಿದ್ದೀರಾ?" ಎಂಬ ಪ್ರಶ್ನೆಯನ್ನು ಕೇಳುತ್ತದೆ. ಆದರೆ ಪ್ರಕೃತಿಯನ್ನು ಪ್ರೀತಿಸುವುದು ಒಂದೇ ದಿನಕ್ಕೆ ಸೀಮಿತವಲ್ಲ; ಅದು ಪ್ರತಿದಿನದ ಕೃತ್ಯವಾಗಿರಬೇಕು.

ಇಂದು ನಾವು ಅನುಭವಿಸುತ್ತಿರುವ ಪರಿಸರದ ಸಮಸ್ಯೆಗಳು, ಗಾಳಿ ಮಾಲಿನ್ಯ, ನೀರಿನ ಅಭಾವ, ಅರಣ್ಯಗಳ ನಾಶ, ಪ್ರಾಣಿ ಪಕ್ಷಿಗಳ ನಾಶ, ಇವೆಲ್ಲವೂ ನಮ್ಮ ಅಜಾಗರೂಕತೆಯ ಪರಿಣಾಮಗಳು. ನಾವು ಬೆಳವಣಿಗೆ ಹೆಸರಿನಲ್ಲಿ ನದಿ ತೀರಗಳನ್ನು ಹೊತ್ತಿಹಾಕುತ್ತಿದ್ದೇವೆ, ಪ್ಲಾಸ್ಟಿಕ್ ಬಳಕೆಯಿಂದ ಭೂಮಿ ನಿಶ್ವಾಸಿಸುತ್ತಿದೆ. ಗಣೇಶ ಹಬ್ಬದ ಸಂದರ್ಭದಲ್ಲಿ ನಮ್ಮ ಸಂಸ್ಕೃತಿಯ ಹೆಸರಿನಲ್ಲಿ ನದಿಗೆ ವಿಷ ಹಾಕುತ್ತಿದ್ದೇವೆ, ರಾಸಾಯನಿಕ ಪೇಂಟ್ ತುಂಬಿದ ವಿಗ್ರಹಗಳನ್ನು ಅದರೊಳಗೆ ಹಾಕುತ್ತೇವೆ. ಆದರೆ ಇದನ್ನು ನಿಲ್ಲಿಸಬೇಕಾಗಿರುವ ಹೊಣೆ ನಮ್ಮೆಲ್ಲರ ಮೇಲಿದೆ.

ಪರಿಸರ ಪ್ರೀತಿಯ ಪ್ರಾರಂಭ ನಮ್ಮ ಮನೆಯ ಓರೆಯಿಂದಲೇ ಆಗಬಹುದು. ನಾವು ಬೆಳೆಸುವ ಒಂದೊಂದು ಗಿಡವು ನೂರಾರು ಉಸಿರಿಗೆ ಆಧಾರವಾಗ ಬಹುದು. ಮನೆಯ ಪಕ್ಕದಲ್ಲೇ ಇದ್ದ ಅಂಗಡಿಗೆ ನಡೆದುಕೊಂಡು ಹೋಗುವುದು ನಮ್ಮ ಆರೋಗ್ಯಕ್ಕೂ ಲಾಭ, ಪ್ರಕೃತಿಗೂ ಸಹಾಯ. ಪ್ರತಿದಿನ ಸ್ನಾನಕ್ಕೆ ಲೀಟರ್ ಲೀಟರ್ ನೀರನ್ನು ವ್ಯರ್ಥ ಮಾಡುವ ಬದಲು ಮಿತವಾಗಿ ಉಪಯೋಗಿಸುವ ಮನೋಭಾವ ನಮ್ಮಲ್ಲಿ ಬೆಳೆಸಿಕೊಳ್ಳಬೇಕು. ಪ್ಲಾಸ್ಟಿಕ್ ಚೀಲ ಬದಲು ಬಟ್ಟೆಯ ಚೀಲ ಬಳಸೋಣ, ಮೈಲಿಗಟ್ಟಲೇ ಚಕ್ಕರಿಸದೇ, ಸೈಕಲ್ ಏರಿ ಹಸಿರಿಗೆ ಹಾರ ನೀಡೋಣ.

ನಾನು ಪ್ರಕೃತಿಯನ್ನು ತಾಯಿಯಾಗಿ ಕಾಣುತ್ತೇನೆ. ಅವಳು ನನ್ನನ್ನು ತಡೆಯದೆ ಎಲ್ಲವನ್ನೂ ಕೊಡುತ್ತಾಳೆ. ನಾನು ಉಸಿರಾಡುತ್ತಿರುವ ಗಾಳಿ, ಕುಡಿಯುತ್ತಿರುವ ನೀರು, ತಿನ್ನುತ್ತಿರುವ ಅನ್ನ, ಎಲ್ಲವೂ ಅವಳ ಕೊಡುಗೆ. ಆ ತಾಯಿಯನ್ನು ಕಾಪಾಡುವುದು ನನ್ನ ಕರ್ತವ್ಯ, ನನ್ನ ಧರ್ಮ. ನನ್ನ ಮಿತ್ರರೆ, ನಾವು ಎಲ್ಲರೂ ಒಂದಾಗಿ ಈ ಸೌಂದರ್ಯವನ್ನು ಉಳಿಸೋಣ. ಗಿಡ ನೆಡುವ ಹಬ್ಬ ಆಚರಿಸೋಣ, ಮಣ್ಣಿನ ವಾಸನೆಗೆ ಮತ್ತೆ ಪ್ರೀತಿಸೋಣ.

ಪ್ರಕೃತಿಯೊಡನೆ ನಮ್ಮ ಬಾಂಧವ್ಯ ಮುರಿಯದಿರಲಿ. ಪ್ರಕೃತಿಯನ್ನು ನೋಯಿಸದೆ ಬದುಕುವುದು ನಿಜವಾದ ಮಾನವೀಯತೆ. ನಾವು ಬದಲಾದರೆ, ನಾಳೆಯ ಪರಿಸರ ಬದಲಾಗುತ್ತದೆ. ಈ ದಿನದ ಪ್ರಾರಂಭದಿಂದಲೇ ನಾವು ನಮ್ಮ ನಡವಳಿಕೆಯಲ್ಲಿ ಸಣ್ಣ ಬದಲಾವಣೆಗಳನ್ನು ತಂದರೆ, ಭೂಮಿಯ ಮೇಲೆ ದೊಡ್ಡ ಲಾಭ ಉಂಟಾಗುತ್ತದೆ. ನಮ್ಮ ಪ್ರಕೃತಿ ನಮ್ಮ ಬದುಕು, ಅದನ್ನು ಕಾಪಾಡೋಣ, ಪ್ರೀತಿಸೋಣ, ಉಳಿಸೋಣ.

**– ಈರಮ್ಮ,** ಪತ್ರಿಕೋದ್ಯಮ ವಿಭಾಗದ ವಿದ್ಯಾರ್ಥಿನಿ
ಕೊಪ್ಪಳ ವಿಶ್ವವಿದ್ಯಾಲಯ

## ನಿಮ್ಮ ಬೆಂಬಲವೇ ನಮ್ಮ ಬಲ

ಸ್ಥಳೀಯ ಪತ್ರಿಕೆಗಳು ತಮ್ಮ ಕಾರ್ಯ ನೈಪುಣ್ಯತೆ ಮತ್ತಷ್ಟು ಅಭಿವೃದ್ಧಿಪಡಿಸಲು ಓದುಗರೂ ಸಹ ಚಂದಾದಾರಿಕೆ, ಸ್ವಯಂಪ್ರೇರಿತವಾಗಿ ಜಾಹೀರಾತು ನೀಡಿ ಬೆಂಬಲಿಸಿ, ಇತರರಿಗೂ ಪರಿಚಯಿಸಿ. ಮಕ್ಕಳ ಶೈಕ್ಷಣಿಕ ಪ್ರಗತಿಯೇ ನಮ್ಮ ಧ್ಯೇಯ. ನಿಮ್ಮ ಸಹಕಾರ ಮತ್ತಷ್ಟು ಉತ್ತಮ ಕಾರ್ಯಗಳಿಗೆ ಸ್ಫೂರ್ತಿ. ಸಸಿಗೆ ನೀರೆರೆಯದಿದ್ದರೆ ಹೂವು ನಿರೀಕ್ಷಿಸಲಾಗದು ಹಾಗೆಯೇ ಪತ್ರಿಕೆಗೆ ಬೆಂಬಲವಿಲ್ಲದೆ ಸೇವೆಯ ನಿರಂತರತೆ ಕನಸು ಕಾಣಲಾಗದು! ಪ್ರತಿ ಸುದ್ದಿಯ ಹಿಂದೆ ಯೋಗ್ಯ ಶ್ರಮವಿದೆ. ಪತ್ರಿಕೆ ಕೊಂಡು ಓದಿ, ಆ ಶ್ರಮವನ್ನು ಗೌರವಿಸಿ!

**ಹಂಪಿ ಟೈಮ್ಸ್, ಹೊಸಪೇಟೆ**

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

**–: ಸಂಪಾದಕರು :–**
**ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.**
ಇ-ಮೇಲ್:hampitimes@gmail.com
M: 94486 33038

## ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

**– ಜಾಹೀರಾತು ವ್ಯವಸ್ಥಾಪಕರು.**

# ಬಯೋಮಿಮಿಕ್ರಿ – ಪ್ರಕೃತಿಯೇ ಗುರು!

# ಹಾರುವ ಕನಸಿಗೆ ಜೀವ ತುಂಬಿದ ಹಕ್ಕಿಗಳು

## ಇದು ತಂತ್ರಜ್ಞಾನವಷ್ಟೇ ಅಲ್ಲ! ಪ್ರಕೃತಿಯೊಂದಿಗೆ ಸಾಮರಸ್ಯದಿಂದ ಬದುಕುವ ಒಂದು ಮಾರ್ಗ


## ಇರುವೆಗಳು ಸಕ್ಕರೆಗೆ ಹೋಗುವ ದಾರಿ ಹೇಗೆ ಕಂಡುಕೊಳ್ಳುತ್ತವೆ? । ಪ್ರಕೃತಿಯ ಜೊತೆ ಹೊಸ ಯುಗಕ್ಕೆ

ಆಕಾಶದಲ್ಲಿ ಹಾರುವ ಕನಸು ಮಾನವನಿಗೆ ಶತಮಾನಗಳಿಂದಲೂ ಇತ್ತು. ಹದಿನೈದನೇ ಶತಮಾನದಲ್ಲಿ, ಮಹಾನ್ ಕಲಾವಿದ ಮತ್ತು ವಿಜ್ಞಾನಿ ಲಿಯೊನಾರ್ಡೊ ಡಾ ವಿಂಚಿ ಈ ಕನಸನ್ನು ಸಾಕಾರಗೊಳಿಸಲು ಪ್ರಕೃತಿಯ ಕಡೆಗೆ ನೋಡಿದರು. ಹಕ್ಕಿಗಳ ರೆಕ್ಕೆಗಳ ರೂಪುರೇಷೆ, ಗಾಳಿಯಲ್ಲಿ ಸಮತೋಲನ ಸಾಧಿಸುವ ತಂತ್ರ, ಮತ್ತು ಹಾರಾಟದ ಚಲನೆಯನ್ನು ಆಳವಾಗಿ ಅಧ್ಯಯನ ಮಾಡಿದರು. ಈ ಸಂಶೋಧನೆಯ ಫಲವಾಗಿ, ಅವರು 'ಒರ್ನಿಥಾಪ್ಟರ್' ಎಂಬ ಒಂದು ಹಾರುವ ಯಂತ್ರದ ವಿನ್ಯಾಸವನ್ನು ರೂಪಿಸಿದರು. ರೆಕ್ಕೆಗಳನ್ನು ಚಾಚುವ, ಹಕ್ಕಿಯಂತೆ ಹಾರುವ ಒಂದು ಕಲ್ಪನೆ! ಆ ಯಂತ್ರ ನಿರ್ಮಾಣವಾಗಲಿಲ್ಲವಾದರೂ, ಮಾನವ ಹಾರಾಟ ಸಾಧ್ಯ ಎಂಬ ವಿಶ್ವಾಸವನ್ನು ಪ್ರಪಂಚಕ್ಕೆ ಕೊಟ್ಟಿತು. ಡಾ ವಿಂಚಿಯ ಈ ಕ್ರಾಂತಿಕಾರಿ ಕಲ್ಪನೆ ಮುಂದಿನ ಶತಮಾನಗಳಲ್ಲಿ ವಿಜ್ಞಾನಿಗಳಿಗೆ ದಾರಿ ತೋರಿಸಿತು. ರೈಟ್ ಸಹೋದರರು 1903ರಲ್ಲಿ ಜಗತ್ತಿನ ಮೊದಲ ವಿಮಾನವನ್ನು ಯಶಸ್ವಿಯಾಗಿ ಹಾರಿಸಿದರು. ಇಂದು ನಾವು ಆ ಹಕ್ಕಿಗಳಿಗೆ ಧನ್ಯವಾದ ಹೇಳಲೇಬೇಕು. ಅವುಗಳ ರೆಕ್ಕೆಗಳೇ ನಮ್ಮ ಆಕಾಶದಲ್ಲಿ ಹಾರುವ ಕನಸಿಗೆ ಜೀವ ತುಂಬಿದವು!

ಹಕ್ಕಿಗಳ ರೆಕ್ಕೆಗಳಷ್ಟೇ ಅಲ್ಲ, ಇರುವೆಗಳ ಚಲನೆ, ಕಮಲದ ಎಲೆಗಳ ಸ್ವಚ್ಛತೆ, ಹಾವುಗಳ ಚರ್ಮದ ರಚನೆ, ಜೇನುನೊಣದ ಗೂಡುಗಳ ವಿನ್ಯಾಸ, ಹೀಗೆ ಇನ್ನೂ ಅನೇಕ ಪ್ರಕೃತಿಯ ಚಿಕ್ಕಪುಟ್ಟ ವಿಸ್ಮಯಗಳು ಮಾನವನ ದೊಡ್ಡ ಸಮಸ್ಯೆಗಳಿಗೆ ಪರಿಹಾರ ನೀಡಿವೆ. ಹೀಗೆ, ಪ್ರಕೃತಿಯ ರಹಸ್ಯಗಳನ್ನು ಬೇಧಿಸಿ ನಮ್ಮ ಬದುಕಿಗೆ ಅಳವಡಿಸಿಕೊಳ್ಳುವ ವಿಜ್ಞಾನಕ್ಕೆ ಬಯೋಮಿಮಿಕ್ರಿ ಎಂದು ಹೆಸರು.

### ಕೋಟ್ಯಾಂತರ ವರ್ಷಗಳ ಪ್ರಯೋಗದ ಫಲ

ಬಯೊಮಿಮಿಕ್ರಿ ಎಂಬ ಪದ ಗ್ರೀಕ್‌ನ 'ಬಯೊ' (ಜೀವನ) ಮತ್ತು 'ಮಿಮಿಕ್ರಿ' (ನಕಲು) ಎಂಬ ಪದಗಳಿಂದ ಬಂದಿದೆ. ಅಂದರೆ, ಪ್ರಕೃತಿಯ ವಿನ್ಯಾಸ, ತಂತ್ರಗಳನ್ನು ಅನುಕರಿಸಿ ಮಾನವ ಸಮಸ್ಯೆಗಳಿಗೆ ಉತ್ತರ ಹುಡುಕುವುದು. ಪ್ರಕೃತಿಯು ಕೋಟ್ಯಾಂತರ ವರ್ಷಗಳಿಂದ ತನ್ನ ವಿನ್ಯಾಸಗಳನ್ನು ಪರಿಪೂರ್ಣಗೊಳಿಸಿದೆ. ಆ ಜ್ಞಾನದಿಂದ ಏಕೆ ಹೊಸತನ ಸೃಷ್ಟಿಸಬಾರದು? 1950ರಲ್ಲಿ ಜೀವಭೌತಶಾಸ್ತ್ರಜ್ಞ ಒಟ್ಟೋ ಶ್ಮಿಟ್ ಈ ಪರಿಕಲ್ಪನೆಯನ್ನು ಪ್ರಸ್ತಾಪಿಸಿದರು. ನಂತರ ಜನೀನ್ ಬೆನ್ಯೂಸ್ ಇದನ್ನು ಜನಪ್ರಿಯಗೊಳಿಸಿದರು, "ಪ್ರಕೃತಿಯು ನಾಲ್ಕೂವರೆ ಬಿಲಿಯನ್ ವರ್ಷಗಳ ಪ್ರಯೋಗ ಮಾಡಿದೆ, ನಾವು ಅದರಿಂದ ಕಲಿಯೋಣ!" ಎಂದು ಹೇಳಿದರು.



ಡಾ. ಎಸ್.ಎಂ. ಶಶಿಧರ್
ಟೆಕ್ ಪರಿಣತರು

Scan For Digital Colourful
HAMPI TIMES E-paper

### ಇರುವೆಗಳಿಂದ ಒಂದು ಪಾಠ

ನೀವು ಎಂದಾದರೂ ಇರುವೆಗಳನ್ನು ಗಮನಿಸಿದ್ದೀರಾ? ಮನೆಯಲ್ಲಿ ಸಕ್ಕರೆ ಡಬ್ಬದ ಬಳಿ ಒಂದು ಇರುವೆ ಓಡಾಡುತ್ತಿದೆ ಎಂದರೆ, ಒಂದೇ ತಾಸಿನಲ್ಲಿ ಇಡೀ ಇರುವೆಯ ಸೈನ್ಯವೇ ಬಂದು ಸಕ್ಕರೆಯನ್ನು ಮುತ್ತಿಕೊಳ್ಳುತ್ತದೆ! ಆದರೆ, ಈ ಇರುವೆಗಳು ಸಕ್ಕರೆಗೆ ದಾರಿ ಹೇಗೆ ಕಂಡುಕೊಳ್ಳುತ್ತವೆ? ಒಂದು ಇರುವೆ ಒಳ್ಳೆಯ ದಾರಿಯನ್ನು ಕಂಡುಕೊಂಡರೆ, ಅದು ದಾರಿಯಲ್ಲಿ ಸುಗಂಧವನ್ನು ಚೆಲ್ಲುತ್ತದೆ, ಮತ್ತು ಇತರ ಇರುವೆಗಳು ಆ ದಾರಿಯನ್ನೇ ಹಿಡಿದು ಬರುತ್ತವೆ. ಒಂದು ವೇಳೆ ದಾರಿ ಸರಿಯಿಲ್ಲದಿದ್ದರೆ, ಆ ಸುಗಂಧ ಮಾಯವಾಗುತ್ತದೆ, ಮತ್ತು ಇರುವೆಗಳು ಬೇರೆ ದಾರಿಯನ್ನು ಹುಡುಕುತ್ತವೆ. ಈ ರೀತಿಯಲ್ಲಿ ಇರುವೆಗಳು ಯಾವಾಗಲೂ ಹತ್ತಿರದ ಮತ್ತು ಉತ್ತಮ ದಾರಿಯನ್ನು ಕಂಡುಕೊಳ್ಳುತ್ತವೆ. ವಿಜ್ಞಾನಿಗಳು ಈ ಇರುವೆಗಳ ತಂತ್ರವನ್ನು ನೋಡಿ, "ಇದನ್ನೇ ನಾವು ಟ್ರಾಫಿಕ್ ಸಮಸ್ಯೆಗೆ ಬಳಸಬಹುದೇ?" ಎಂದು ಯೋಚಿಸಿದರು. ಇರುವೆಗಳ ಈ ದಾರಿ ಹುಡುಕುವ ತಂತ್ರವನ್ನು ಕಂಪ್ಯೂಟರ್‌ಗೆ ಕಲಿಸಿದರು. ಇದನ್ನು 'ಆಂಟ್ ಕಾಲೊನಿ ಆಪ್ಟಿಮೈಸೇಶನ್' ಎಂದು ಕರೆಯುತ್ತಾರೆ. ಈ 'ಇರುವೆಗಳ ಜಿಪಿಎಸ್' ತಂತ್ರವನ್ನು ಬಳಸುವ ಒಂದು ಉದಾಹರಣೆ ಎಂದರೆ 'ಗೂಗಲ್ ಮ್ಯಾಪ್ಸ್' ಮತ್ತು 'ವೇಝ್' ಆಪ್‌ಗಳು.

ಮುಂಜಾನೆ ಹತ್ತು ಗಂಟೆಗೆ, ನೀವು ಜಯನಗರದಿಂದ ವೈಟ್‌ಫೀಲ್ಡ್‌ಗೆ ಹೊರಟಿದ್ದೀರಿ, ಆದರೆ ಔಟರ್ ರಿಂಗ್ ರೋಡ್‌ನಲ್ಲಿ ಟ್ರಾಫಿಕ್ ಜಾಮ್ ಆಗಿದೆ. ಗೂಗಲ್ ಮ್ಯಾಪ್ಸ್ ತೆರೆದಾಗ, ಅದು ಒಂದು ಸಣ್ಣ ಇರುವೆ ಸೈನ್ಯದಂತೆ ಕೆಲಸ ಮಾಡುತ್ತದೆ! ಆ ಆಪ್ ಎಲ್ಲಾ ರಸ್ತೆಗಳನ್ನು ಒಂದೊಂದಾಗಿ ಪರಿಶೀಲಿಸುತ್ತದೆ, ಟ್ರಾಫಿಕ್ ಎಷ್ಟಿದೆ, ರಸ್ತೆ ಮುಚ್ಚಿದೆಯಾ, ಮೆಟ್ರೋ ಕಾಮಗಾರಿ ನಡೆಯುತ್ತಿದೆಯಾ ಎಂಬುದನ್ನೆಲ್ಲಾ ನೋಡುತ್ತದೆ. ಇರುವೆಗಳು ಸುಗಂಧದ ಹಾದಿಯನ್ನು ಹಿಡಿಯುವಂತೆ, ಆಪ್ ಒಳ್ಳೆಯ ದಾರಿಯನ್ನು ಕಂಡುಕೊಂಡು, 'ಔಟರ್ ರಿಂಗ್ ರೋಡ್ ಬಿಟ್ಟು, ಕೋರಮಂಗಲದ ಮೂಲಕ ಹೋಗಿ, ಅಲ್ಲಿ ಟ್ರಾಫಿಕ್ ಕಡಿಮೆ' ಎಂದು ಸೂಚಿಸುತ್ತದೆ. ನೀವು ಆ ದಾರಿಯಲ್ಲಿ ಹೋಗಿ, ಸಮಯಕ್ಕೆ ಸರಿಯಾಗಿ ಸ್ನೇಹಿತನ ಮನೆಗೆ ತಲುಪುತ್ತೀರಿ. ಇರುವೆಗಳಿಗೆ ಒಂದು ದೊಡ್ಡ ಧನ್ಯವಾದ ಹೇಳಬೇಕು! ಇದು ಅವುಗಳ ಚಲನೆಯ ವಿಧಾನವನ್ನು ಅಧ್ಯಯನ ಮಾಡಿ, ರೂಪಿಸಿದ ತಂತ್ರಜ್ಞಾನ. ಇದು ಬಯೊಮಿಮಿಕ್ರಿಯ ಅದ್ಭುತ ಶಕ್ತಿ!



### ಬುಲೆಟ್ ಟ್ರೈನ್: ಕಿಂಗ್‌ಫಿಶರ್‌ನಿಂದ ಸ್ಫೂರ್ತಿ

ಜಪಾನ್‌ನ ಶಿಂಕಾನ್‌ಸೆನ್ ಬುಲೆಟ್ ಟ್ರೈನ್ ಜಗತ್ತಿನ ಅತ್ಯಂತ ವೇಗದ ಮತ್ತು ದಕ್ಷ ರೈಲುಗಳಲ್ಲಿ ಒಂದಾಗಿದೆ. ಆದರೆ, 1990ರ ದಶಕದಲ್ಲಿ ಒಂದು ಸಮಸ್ಯೆ ಎದುರಾಯಿತು. ರೈಲುಗಳು ಸುರಂಗದ ಮೂಲಕ ಹಾದು ಹೋಗುವಾಗ, ಹೆಚ್ಚಿನ ವೇಗದಿಂದ ಗಾಳಿಯ ಒತ್ತಡ ಬದಲಾವಣೆಯಾಗಿ ಕಿವಿ ಗಡಚಿಕ್ಕುವ ಶಬ್ಧ ಹೊಮ್ಮುತ್ತಿತ್ತು. ಇದನ್ನು 'ಟನಲ್ ಬೂಮ್' ಎಂದು ಕರೆಯಲಾಗುತ್ತಿತ್ತು. ಇದರಿಂದ ಸುತ್ತಮುತ್ತಲಿನ ಪರಿಸರಕ್ಕೆ, ಜನರಿಗೆ ಮತ್ತು ಜೀವಸಂಕುಲಕ್ಕೆ ತೊಂದರೆಯಾಗಿತ್ತು. ಈ ರೈಲಿನ ವಿನ್ಯಾಸಕಾರ, ಎಂಜಿನಿಯರ್ ಐಜಿ ನಕಾಟ್ಸು ಪಕ್ಷಿಗಳ ಬಗ್ಗೆ ಅಪಾರ ಆಸಕ್ತಿ ಹೊಂದಿದ್ದರು. ಕಿಂಗ್‌ಫಿಶರ್ ಪಕ್ಷಿಯು ನೀರಿಗೆ ಧುಮುಕಿದಾಗ ಯಾವುದೇ ಶಬ್ದವಿಲ್ಲದೆ, ನೀರು ಆಚೀಚೆ ಚಿಮ್ಮದಂತೆ ಚಲಿಸುತ್ತದೆ ಎಂಬುದನ್ನು ಅವರು ಗಮನಿಸಿದ್ದರು. ಈ ಗುಣವನ್ನು ಅಧ್ಯಯನ ಮಾಡಿದ ನಕಾಟ್ಸು, ಶಿಂಕಾನ್‌ಸೆನ್ ರೈಲಿನ ಮುಂಭಾಗವನ್ನು ಕಿಂಗ್‌ಫಿಶರ್‌ನ ಕೊಕ್ಕಿನ ಆಕಾರದಲ್ಲಿ ಮರುವಿನ್ಯಾಸಗೊಳಿಸಿದರು. ಹೊಸ ರೈಲಿನ ಮೂಗು ಉದ್ದವಾಗಿ, ಚೂಪಾಗಿರುವುದರಿಂದ ಗಾಳಿಯ ಒತ್ತಡವನ್ನು ಸಮತೋಲನಗೊಳಿಸಿತು, ಟನಲ್ ಬೂಮ್ ಸಮಸ್ಯೆಯನ್ನು ನಿವಾರಿಸಿತು. ಬುಲೆಟ್ ಟ್ರೈನ್‌ನ ವಿನ್ಯಾಸ ಒಂದು ತಾಂತ್ರಿಕ ಕ್ರಾಂತಿಯನ್ನೇ ಸೃಷ್ಟಿಸಿ, ಬಯೋಮಿಮಿಕ್ರಿಯ ಮಹತ್ವವನ್ನು ಸಾಬೀತುಪಡಿಸಿತು.

### ಎಲ್ಲೆಡೆ ಪ್ರಕೃತಿ ಪಾಠಗಳು

ಹಲ್ಲಿ ಪಾದಗಳು ಅಂಟು ಇಲ್ಲದೇ ಮೇಲ್ಮೈಗೆ ಅಂಟಿಕೊಳ್ಳುವ ಗುಣವನ್ನು ಆಧರಿಸಿ ವಿಜ್ಞಾನಿಗಳು 'ಒಣ ಅಂಟು'ಗಳು ಮತ್ತು ಸುಧಾರಿತ ಕ್ಲೈಂಬಿಂಗ್ ಸಾಧನಗಳನ್ನು ರೂಪಿಸಿದ್ದಾರೆ. ಇನ್ನೊಂದೆಡೆ, ತಿಮಿಂಗಿಲದ ಫ್ಲಿಪ್ಪರ್‌ಗಳ ಆಕಾರದಿಂದ ಸ್ಫೂರ್ತಿ ಪಡೆದ ಗಾಳಿ ಟರ್ಬೈನ್ ಬ್ಲೇಡ್‌ಗಳು ವಾಯು ಪ್ರತಿರೋಧವನ್ನು ಕಡಿಮೆ ಮಾಡಿ ಹೆಚ್ಚು ಶಕ್ತಿಯನ್ನು ಉತ್ಪಾದಿಸುತ್ತವೆ,. ಅಂತೆಯೇ, ಗೆದ್ದಲು ಹುತ್ತಗಳು ಗೂಡಿನಲ್ಲಿ ಉಷ್ಣತೆ ಸಮತೋಲನ ಮಾಡುವ ತಂತ್ರ ಶಕ್ತಿ-ಸಮರ್ಥ ಕಟ್ಟಡಗಳಿಗೆ ಸ್ಫೂರ್ತಿ ನೀಡಿದೆ. ಕಮಲದ ಎಲೆಗಳ ಸ್ವಚ್ಛತೆಯಿಂದ ಪ್ರೇರಣೆ ಪಡೆದು, ಮಣ್ಣು ಮತ್ತು ನೀರು ಅಂಟದ ಬಟ್ಟೆಗಳನ್ನು ರೂಪಿಸಲಾಗಿದೆ. ಇವೆಲ್ಲವೂ ಪ್ರಕೃತಿಯ ಅದ್ಭುತಗಳಿಂದ ರೂಪುಗೊಂಡ ನವೀನ ಆವಿಷ್ಕಾರಗಳ ಉದಾಹರಣೆಗಳು.

### ಪ್ರಕೃತಿಯ ಜೊತೆ ಹೊಸ ಯುಗಕ್ಕೆ

ಬಯೊಮಿಮಿಕ್ರಿಯು ಕಡಿಮೆ ತ್ಯಾಜ್ಯವನ್ನು ಉತ್ಪಾದಿಸುತ್ತದೆ, ಏಕೆಂದರೆ ಪ್ರಕೃತಿ ಸಂಪನ್ಮೂಲಗಳನ್ನು ಪರಿಪೂರ್ಣವಾಗಿ ಬಳಸುತ್ತದೆ. ಸುಸ್ಥಿರತೆಯನ್ನು ಉತ್ತೇಜಿಸಿ, ಪರಿಸರ ಸ್ನೇಹಿ ಪರಿಹಾರಗಳನ್ನು ನೀಡುತ್ತದೆ. ಪ್ರಕೃತಿಯಿಂದ ಸ್ಫೂರ್ತಿ ಪಡೆದು ನಾವೀನ್ಯತೆ ಮತ್ತು ವಿನ್ಯಾಸ ವೈವಿಧ್ಯತೆಯನ್ನು ತರುತ್ತದೆ. ಸಣ್ಣ ವ್ಯಾಪಾರಗಳಿಗೆ ದಾರಿ ಮಾಡಿ ಸ್ಥಳೀಯ ಆರ್ಥಿಕತೆಯನ್ನು ಬೆಂಬಲಿಸುತ್ತದೆ.

ಪ್ರಕೃತಿಯ ಶಾಲೆಯಲ್ಲಿ ಕಲಿಯುವ ಪಾಠಗಳು ನಮ್ಮ ಜೀವನವನ್ನು ಸರಳ, ಸುಸ್ಥಿರ, ಮತ್ತು ಸಂತೋಷದಾಯಕವಾಗಿಸುತ್ತವೆ. ಬಯೊಮಿಮಿಕ್ರಿಯು ಒಂದು ಮ್ಯಾಜಿಕ್. ಇದು ಆಕಾಶದಲ್ಲಿ ಹಾರುವ ಕನಸಿನಿಂದ ಹಿಡಿದು, ಬೆಂಗಳೂರಿನ ಟ್ರಾಫಿಕ್ ಸಮಸ್ಯೆಯವರೆಗೆ, ನಮ್ಮ ದೈನಂದಿನ ಜೀವನದಲ್ಲಿ ಬದಲಾವಣೆ ತರುತ್ತದೆ. ಬಯೋಮಿಮಿಕ್ರಿಯು ಕೇವಲ ಒಂದು ತಂತ್ರಜ್ಞಾನವಲ್ಲ; ಇದು ಪ್ರಕೃತಿಯೊಂದಿಗೆ ಸಾಮರಸ್ಯದಿಂದ ಬದುಕುವ ಒಂದು ಮಾರ್ಗ. ಆದ್ದರಿಂದ, ಮುಂದಿನ ಬಾರಿ ಚಿಟ್ಟೆಯ ರೆಕ್ಕೆಯನ್ನೋ, ಇರುವೆಯ ಗೂಡನ್ನೋ ಗಮನಿಸಿದಾಗ, ಯೋಚಿಸಿ, ಇದರಿಂದ ನಾವು ಏನು ಕಲಿಯಬಹುದು? ಪ್ರಕೃತಿಯೇ ಗುರು, ಮತ್ತು ನಾವೆಲ್ಲರೂ ಅದರ ವಿದ್ಯಾರ್ಥಿಗಳು!

# ನೆಹರೂ ಹಾಕಿದ ಅಡಿಪಾಯಗಳಿಂದ ಭಾರತದ ಆರ್ಥಿಕ ಪ್ರಗತಿ

## ವಿಜ್ಞಾನ-ತಂತ್ರಜ್ಞಾನದ ಪ್ರಗತಿ ಮೂಲಕ ವೈಜ್ಞಾನಿಕ ಭಾರತದ ನಿರ್ಮಾತೃ ನೆಹರೂ: ಸಿಎಂ

■ **ಹಂಪಿ ಟೈಮ್ಸ್ ಬೆಂಗಳೂರು**

ನೆಹರೂ ಹಾಕಿದ ಅಡಿಪಾಯಗಳಿಂದ ಭಾರತ ವಿಶ್ವದ ಐದನೇ ದೊಡ್ಡ ಆರ್ಥಿಕ ಶಕ್ತಿಯಾಗಿದೆ. ಅಪಾರ ಶಿಕ್ಷಣ ಮತ್ತು ಜ್ಞಾನ ಹೊಂದಿದ್ದ ನೆಹರೂ ಆಧುನಿಕ ಭಾರತದ ನಿರ್ಮಾಣಕ್ಕೆ ಭದ್ರವಾದ ಅಡಿಪಾಯ ಹಾಕಿದರು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ವಿವರಿಸಿದರು.

ಕೆಪಿಸಿಸಿ ಕಚೇರಿಯಲ್ಲಿ ನಡೆದ ಆಧುನಿಕ ಭಾರತದ ನಿರ್ಮಾತೃ ಜವಾಹರಲಾಲ್ ನೆಹರೂ ಅವರ ಪುಣ್ಯಸ್ಮರಣೆ ಕಾರ್ಯಕ್ರಮದಲ್ಲಿ ಮಾತನಾಡಿದರು. ದೇಶದಲ್ಲಿ ಭಾರತೀಯರ ಕಣ್ಣೀರು ಒರೆಸುವ, ನೋವುಗಳಿಗೆ ಪರಿಹಾರ ಒದಗಿಸುವುದು ನಮ್ಮ ಕೆಲಸ ಎಂದು ಆರಂಭದಲ್ಲಿ ಘೋಷಣೆ ಮಾಡಿ ನೆಹರೂ ದೇಶ ನಿರ್ಮಾಣದಲ್ಲಿ ತೊಡಗಿಸಿಕೊಂಡರು ಎಂದು ಸಿಎಂ ವಿವರಿಸಿದರು.

ಬ್ರಿಟೀಷರು ಲೂಟಿ ಮಾಡಿದ್ದ ದೇಶದಲ್ಲಿ ಯಾವ ಸವಲತ್ತುಗಳೂ ಇರಲಿಲ್ಲ. ಅಂಥಾ ಹೊತ್ತಲ್ಲಿ ಪ್ರಧಾನಿಯಾಗಿ ದೇಶದ ಚುಕ್ಕಾಣಿ ಹಿಡಿದ ನೆಹರೂ ದೇಶವನ್ನು ದಶ ದಿಕ್ಕುಗಳಿಂದ ಕಟ್ಟಿ ನಿಲ್ಲಿಸಿದ್ದನ್ನು ವಿವರಿಸಿದರು.

ಅಪಾರ ಶ್ರೀಮಂತ ಕುಟುಂಬದ ನೆಹರೂ ಕುಟುಂಬದ ಆಸ್ತಿಯನ್ನು ದೇಶಕ್ಕೆ ಒಪ್ಪಿಸಿ ದೇಶದ ಪ್ರತಿಯೊಂದು ಕ್ಷೇತ್ರಗಳೂ ಪ್ರಗತಿ ಪಥದಲ್ಲಿ ಸಾಗುವಂತೆ ನೋಡಿಕೊಂಡಿದ್ದನ್ನು ಅಂಕಿ ಅಂಶಗಳ ಸಮೇತ ವಿವರಿಸಿದರು.





ಆಹಾರ ಕ್ರಾಂತಿ, ಹಸಿರು ಕ್ರಾಂತಿಯ ಜೊತೆಗೆ ವಿಜ್ಞಾನ-ತಂತ್ರಜ್ಞಾನದ ಪ್ರಗತಿಗೆ ಕಾರ್ಯಕ್ರಮಗಳು, ತಾಂತ್ರಿಕ ವಿಶ್ವ ವಿದ್ಯಾನಿಲಯಗಳನ್ನು ಸ್ಥಾಪಿಸುವ ಮೂಲಕ, ತಾಂತ್ರಿಕ ಕ್ಷೇತ್ರ ಪ್ರಗತಿ ಮೂಲಕ ವೈಜ್ಞಾನಿಕ ಭಾರತದ ನಿರ್ಮಾತೃ ಕೂಡ ಆದ ನೆಹರೂ ಅವರ ಕೊಡುಗೆಯನ್ನು ಬಿಜೆಪಿ , RSS ಎಷ್ಟೇ ಅಳಿಸಲು ಹೆಣಗಾಡಿದರೂ ಅದು ಸಾಧ್ಯವಾಗುತ್ತಿಲ್ಲ ಎಂದರು.

ಸ್ವಾತಂತ್ರ್ಯ ಹೋರಾಟದಲ್ಲೇ ಭಾಗವಹಿಸದೆ ಬ್ರಿಟೀಷರ ಜೊತೆಗಿದ್ದ ಖಖಖ, ಃಎಕ ಯವರು ಈಗ ದೇಶಭಕ್ತಿ ಬಗ್ಗೆ ಬರಿ ಭಾಷಣ ಮಾಡುವುದು ಡೋಂಗಿತನ ಎಂದು ಟೀಕಿಸಿದರು.

ಪ್ರಜಾಪ್ರಭುತ್ವ, ಸಂಸದೀಯ ವ್ಯವಸ್ಥೆಯಲ್ಲಿ, ಸಾಮಾಜಿಕ ನ್ಯಾಯದಲ್ಲಿ ನಂಬಿಕೆ ಇಲ್ಲದ ಬಿಜೆಪಿಯವರು ಸಾಮಾಜಿಕ ನ್ಯಾಯದ ಪರವಾಗಿದ್ದ ಅಂಬೇಡ್ಕರ್, ನೆಹರೂ ಬಗ್ಗೆ ಬಿಜೆಪಿ, RSS ಸಹಸ್ರ ಸುಳ್ಳುಗಳನ್ನು ಸೃಷ್ಟಿಸುತ್ತಿದೆ ಎಂದರು.

ಅಂಬೇಡ್ಕರ್ ಅವರನ್ನು ಚುನಾವಣೆಯಲ್ಲಿ ಸೋಲಿಸಿದ್ದು ಡಾಂಗೆ ಮತ್ತು ಸಾವರ್ಕರ್ ಎಂದು ಸ್ವತಃ ಅಂಬೇಡ್ಕರ್ ಅವರೇ ತಮ್ಮದೇ ಹಸ್ತಾಕ್ಷರದಲ್ಲಿ ಪತ್ರ ಬರೆದಿದ್ದಾರೆ. ಆದರೂ ಬಿಜೆಪಿ, RSS ಅಂಬೇಡ್ಕರ್ ಸೋಲಿಗೆ ಕಾಂಗ್ರೆಸ್ ಕಾರಣ ಎಂದು ಹಸಿ ಹಸಿ ಸುಳ್ಳುಗಳನ್ನು ಹಂಚುತ್ತಾ ತಿರುಗುತ್ತಿದ್ದಾರೆ ಎಂದರು.

ಬಿಜೆಪಿಗೆ ಗೊತ್ತಿರುವುದು ಬರಿ ಹಿಂಸೆ ಮತ್ತು ಸುಳ್ಳು ಬಿಜೆಪಿಗೆ ಗೊತ್ತಿರುವುದು ಬರಿ ಹಿಂಸೆ ಮತ್ತು ಸುಳ್ಳು. ದಲಿತರು, ಶೂದ್ರರ ಮೇಲೆ ಕೇಸುಗಳು ಬೀಳುವಂತೆ ಮಾಡುವುದು ಇದೇ BJP ಮತ್ತು RSS. ಆಮೇಲೆ ಅವರನ್ನು ಜೈಲಿನಿಂದ ಕರೆದುಕೊಂಡು ಬರುವುದೂ ಇವರೇ. ಇದೇ ನಾಟಕ ಆಡಿಕೊಂಡೇ ಅವರು ಕಾಲಕಳೆಯುತ್ತಿದ್ದಾರೆ ಎಂದು ಟೀಕಿಸಿದರು.

ಹಂಪಿ ಟೈಮ್ಸ್
SCAN TO WATCH

SSLC ಹೈಸ್ಕೋರ್ ಸೀಕ್ರೇಟ್ ಏನು ಗೊತ್ತಾ ಟಾಪರ್ ಇಂದುಶ್ರೀ ಮಾತಲ್ಲೇ ಕೇಳಿ...

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA, PRGI No:KARKAN/2023/88055

## ಕವಿ ಮನಸು

### ಅಂತರ್ಮುಖಿ

ಜನನ ಮರಣಗಳ ಚಕ್ರವ ಸುತ್ತಿ
ಹಲವು ಸಹಸ್ರ ಜನ್ಮವ ಎತ್ತಿ
ಅರಿಯುವವನೇ ಎಂದಾದರೂ ಮಾನವ
ತನ್ನ ನಿಜ ಸ್ವ ಸ್ವರೂಪವ

ಅರಿವೇ ಗುರುವು ಜೀವನ್ಮುಕ್ತಿಗೆ
ಶರಣಾಗತಿ ಬೇಕು ನಿಜವಾದ ಭಕ್ತಿಗೆ
ಮನಸು ದೇಹ ಬಹಿರ್ಮುಖಿಯು
ಸ್ಥಿರಗೊಳಿಸಿ ನೀ ಆಗು ಅಂತರ್ಮುಖಿಯು

ಜಗದ ಗದ್ದಲಕೆ ಕಿವುಡಾಗಿ
ಮಾಯೆಯ ನೋಟಕೆ ಕುರುಡಾಗಿ
ಜಿಹ್ವಾ ಚಾಪಲ್ಯಕೆ ಮೂಕನಾಗಿ
ನಿಲ್ಲಿಸು ಮನಸನು ಸ್ಥಿರವಾಗಿ

ಅಂತರ್ಮುಖದಿ ಕಾಣು ಒಳಗಿನ ಜ್ಯೋತಿ
ಅರಿವಾಗುವುದು ನಿನಗೆ ಮುಸುಕಿದ ಭ್ರಾಂತಿ
ಹೊಳೆವುದು ಹೃದಯದಿ ನಿತ್ಯ ಸತ್ಯದ ಹೊಳಪು
ಮಾನವ ಜನ್ಮಕೆ ಅದೇ ನಿಜ ಒನಪು

~ ಚೇತನ ಭಾರ್ಗವ, ಬೆಂಗಳೂರು

## ಪದ್ಮ ಶ್ರೇಣಿಯ ಪ್ರಶಸ್ತಿಗೆ ಅರ್ಜಿ ಆಹ್ವಾನ

**ಹಂಪಿ ಟೈಮ್ಸ್ ರಾಯಚೂರು**


ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ 2026ನೇ ಸಾಲಿನ ಸಮಾಜದ ಯಾವುದೇ ಕ್ಷೇತ್ರದಲ್ಲಿ ಅತ್ಯುತ್ತಮ ಸೇವೆ ಸಲ್ಲಿಸಿರುವ ಅರ್ಹ ವ್ಯಕ್ತಿಗಳಿಂದ ಪದ್ಮಶ್ರೇಣಿಯ ಪ್ರಶಸ್ತಿಗೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

ಪದ್ಮಶ್ರೇಣಿಯ ಪ್ರಶಸ್ತಿಗಳಾದ ಪದ್ಮವಿಭೂಷಣ, ಪದ್ಮ ಭೂಷಣ ಮತ್ತು ಪದ್ಮಶ್ರೀ ಪ್ರಶಸ್ತಿಗಳನ್ನು ಗಣರಾಜ್ಯೋತ್ಸವದ ಹಿಂದಿನ ದಿನದಂದು ಕೇಂದ್ರ ಸರ್ಕಾರದಿಂದ ಪ್ರಕಟಿಸಲಾಗುವುದು. ಕ್ಷೇತ್ರಗಳಲ್ಲಿ ಶ್ರೇಷ್ಠತೆಗೊಳಿಸಿ ಅಸಾಧಾರಣ ಕೊಡುಗೆ ನೀಡಿರುವ ವ್ಯಕ್ತಿಗಳಿಗೆ ಪ್ರಶಸ್ತಿ ನೀಡಲಾಗುತ್ತದೆ.

ಕಲೆ ಕ್ಷೇತ್ರ: ಜನಪ್ರಿಯ ಕಲೆ, ಸಂಗೀತ, ಚಿತ್ರಕಲೆ, ವಾಸ್ತುಶಿಲ್ಪಾ, ಶಿಲ್ಪಕಲೆ, ಚಲನಚಿತ್ರ, ಛಾಯಾಗ್ರಹಣ ಇತರೆ., ಸಮಾಜ ಕಾರ್ಯ ಕ್ಷೇತ್ರ: ಸಮಾಜ ಸೇವೆ, ಧರ್ಮಾರ್ಥ ಸೇವೆ, ಸಮುದಾಯ ಯೋಜನೆಯ ನಿಮಿತ್ತದ ಕೊಡುಗೆ ಒಳಗೊಂಡಂತೆ., ಸಾರ್ವಜನಿಕ ವ್ಯವಹಾರ: ಕಾನೂನು ಮತ್ತು ಸಾರ್ವಜನಿಕ ಜೀವನ, ರಾಜಕೀಯ ಇತ್ಯಾದಿ., ವಿಜ್ಞಾನ, ತಾಂತ್ರಿಕ, ತಂತ್ರಜ್ಞಾನ ಮತ್ತು ಇತರೆ ಗೌರವಾನ್ವಿತ ವೃತ್ತಿ: ಬಾಹ್ಯಾಕಾಶ,ಇಂಜಿನೀಯರಿಂಗ್,ಅಣುವಿಜ್ಞಾನ, ಮಾಹಿತಿ ತಂತ್ರಜ್ಞಾನ, ಸಂಶೋಧನೆ ಇತ್ಯಾದಿ., ವ್ಯಾಪರ ಮತ್ತು ಕೈಗಾರಿಕೆ: ಬ್ಯಾಂಕಿಂಗ್, ಆರ್ಥಿಕ ಚಟುವಟಿಕೆ, ಮ್ಯಾನೇಜಮೆಂಟ್, ಪ್ರವಾಸೋದ್ಯಮ ಅಭಿವೃದ್ಧಿ ಮತ್ತು ವಾಣಿಜ್ಯ ಒಳಗೊಂಡಂತೆ, ವೈದ್ಯಕೀಯ: ವೈದ್ಯಕೀಯ ಸಂಶೋಧನೆ, ಆಯುರ್ವೇದದಲ್ಲಿ ಕುಶಲತೆ, ಹೋಮಿಯೋಪತಿ, ಸಿದ್ಧ, ಆಲೋಪತಿ, ನ್ಯಾಚುರೋಪತಿ ಇತ್ಯಾದಿ, ಸಾಹಿತ್ಯ ಮತ್ತು ಶಿಕ್ಷಣ: ಪತ್ರಿಕೋದ್ಯಮ, ಬೋಧನೆ, ಪುಸ್ತಕ ಬರೆಯುವಿಕೆ, ಸಾಹಿತ್ಯ, ವೈದ್ಯ, ಶಿಕ್ಷಣ, ಅಭಿವೃದ್ಧಿ, ಶಿಕ್ಷಣ ಸುಧಾರಣೆ ಇತ್ಯಾದಿ, ನಾಗರೀಕ ಸೇವೆ: ಆಡಳಿತದಲ್ಲಿ ಸರ್ಕಾರಿ ನೌಕರರು ಸಾಧಿಸಿರುವ ಶ್ರೇಷ್ಠತೆ, ವ್ಯಾಪರ ಮತ್ತು ಕೈಗಾರಿಕೆ: ಬ್ಯಾಂಕಿಂಗ್, ಆರ್ಥಿಕ ಚಟುವಟಿಕೆ, ಮ್ಯಾನೇಜಮೆಂಟ್, ಪ್ರವಾಸೋದ್ಯಮ ಅಭಿವೃದ್ಧಿ ಮತ್ತು ವಾಣಿಜ್ಯ ಒಳಗೊಂಡಂತೆ, ನಾಗರೀಕ ಸೇವೆ: ಆಡಳಿತದಲ್ಲಿ ಸರ್ಕಾರಿ ನೌಕರರು ಸಾಧಿಸಿರುವ ಶ್ರೇಷ್ಠತೆ, ಕ್ರೀಡೆ: ಕ್ರೀಡೆ, ಅಥ್ಲೆಟಿಕ್ಸ್, ಸಾಹಸ ಕ್ರೀಡೆ ಮತ್ತು ಯೋಗ, ಇತರ ಕ್ಷೇತ್ರಗಳು: ಮಾನವ ಹಕ್ಕುಗಳ ಸಂರಕ್ಷಣೆ, ಭಾರತದ ಸಂಸ್ಕೃತಿಯ ಪ್ರಚಾರ, ಪರಿಸರ ಸಂರಕ್ಷಣೆ ಮತ್ತು ವನ್ಯಮೃಗ ಸಂರಕ್ಷಣೆ ಕ್ಷೇತ್ರಗಳಲ್ಲಿ ನೀಡಬಹುದಾದ ಪದ್ಮ ಶ್ರೇಣಿಯ ಪ್ರಶಸ್ತಿಗಳಿಗೆ ಜೂನ್ 12ರ ಸಂಜೆ 5.30ಗಂಟೆಯೊಳಗಾಗಿ ನಮೂನೆಯಲ್ಲಿ ವಿವರವಾದ ವರದಿಯನ್ನು ಸಾಫ್ಟ್ ಪ್ರತಿಯನ್ನು ಇ-ಮೇಲ್ ವಿಳಾಸ: ಜಇಖಿ.ಡಿಚುಖಿಣಿಹಡಿ@ರಟಚುಟಿ.ಛಿಂಟ ಮತ್ತು ಹಾರ್ಡ್ ಪ್ರತಿಯನ್ನು ಸಹಾಯಕ ನಿರ್ದೇಶಕರ ಕಚೇರಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಪಂಡಿತ ಸಿದ್ದರಾಮ ಜಂಬಲದಿನ್ನಿ ಜಿಲ್ಲಾ ರಂಗಮಂದಿರ ರಾಯಚೂರು ಇವರಿಗೆ ಕಳುಹಿಸಿಕೊಡಬಹುದಾಗಿದೆ ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ
ವಿಜಯನಗರ ಜಿಲ್ಲೆಯ ಸಮಗ್ರ ಸುದ್ದಿ, ವಿಜ್ಞಾನ, ವಿಶೇಷ ಲೇಖನಗಳನ್ನು ಓದಲಿಚ್ಛಿಸುವವರು ಈ ಕೆಳಗಿನ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ, ವಾಟ್ಸಪ್ ಗ್ರೂಪಿಗೆ ಜಾಯಿನ್ ಆಗಿ ಹಂಪಿ ಟೈಮ್ಸ್ ಇ-ಪತ್ರಿಕೆ ಓದಿರಿ.
Only Admins can Send Messages to this Group
Join with Us

# ಯಶಸ್ಸಿನ ಹಾದಿ ಸುಲಭದ್ದಲ್ಲ...



ಜನಸಾಮಾನ್ಯರಿಗೂ ಉಪಯೋಗವಾಗುವಂತಹ ವಾಹನವನ್ನು ಆತ ತಯಾರಿಸುತ್ತೇನೆ ಎಂದು ಹೇಳಿದಾಗ ಎಲ್ಲರೂ ಆತನ ಕಡೆ ಕೈ ಮಾಡಿ ನಕ್ಕರು, ಆದರೆ ಅವರಾರ ಮಾತುಗಳಿಗೂ ತಲೆ ಕೆಡಿಸಿಕೊಳ್ಳದ ಆತ ಕೆಲವೇ ವರ್ಷಗಳಲ್ಲಿ ಅಂತಹದೊಂದು ವಾಹನವನ್ನು ನಿರ್ಮಿಸಿ ರಸ್ತೆಗೆ ಬಿಟ್ಟಾಗ ಎಲ್ಲರೂ ಸಂಭ್ರಮದಿಂದ ಅದನ್ನು ಖರೀದಿಸಿ ಬಳಸಿದರು..

ಮಿಚಿಗನ್ ಪ್ರಾಂತದ ಹೊಲಗಳು ಮತ್ತು ದನ ಕರುಗಳಿಂದ ಸುತ್ತುವರಿದ ಹೊಲವೊಂದರಲ್ಲಿ ಇದ್ದ ಪುಟ್ಟ ಮನೆಯಲ್ಲಿ ಹುಟ್ಟಿದ ಆತ ತನ್ನ ಕುಟುಂಬದ ಸಾಂಪ್ರದಾಯಿಕ ಉದ್ಯೋಗವಾದ ಕೃಷಿಯಲ್ಲಿ ಬದುಕನ್ನು ಕಂಡುಕೊಳ್ಳಲಿ ಎಂದೇ ಆತನ ಪಾಲಕರು ಆಶಿಸಿದರು, ಆದರೆ ಸಾಂಪ್ರದಾಯಿಕ ಕೃಷಿ ಮತ್ತು ಹೈನುಗಾರಿಕೆಯಿಂದ ದೂರವಾಗಿ ತನ್ನ ಹೃದಯಕ್ಕೆ ಹತ್ತಿರವಾದ ಮಶೀನುಗಳೊಂದಿಗೆ ಆತ ಸಹವಾಸ ಮಾಡಿದ.

ಎಲ್ಲಾ ಚಿಕ್ಕ ಮಕ್ಕಳಂತೆ ಆತನಿಗೂ ಯಂತ್ರಗಳಲ್ಲಿ ವಿಪರೀತ ಆಸಕ್ತಿ ಕೇವಲ 12ನೆಯ ವಯಸ್ಸಿನಲ್ಲಿ ಆತ ತನ್ನ ತಂದೆ ತನಗೆ ಕೊಡಿಸಿದ ವಾಚನ್ನು ಸಂಪೂರ್ಣವಾಗಿ ತೆರೆದು ಅದರ ಬಿಡಿ ಭಾಗಗಳನ್ನು ಮತ್ತೆ ಜೋಡಿಸಿದ್ದ. ತನ್ನ 15ನೇ ವಯಸ್ಸಿನಲ್ಲಿ ಆತ ಚಿಕ್ಕ ಪುಟ್ಟ ಯಂತ್ರಗಳನ್ನು ತಯಾರಿಸಲಾರಂಭಿಸಿದ. ಉಳಿದವರು ಕುದುರೆಯ ಸವಾರಿ ಮಾಡುತ್ತಿರುವಾಗ ಆತ ಮೊಟರುಗಳ ಗೇರುಗಳನ್ನು ಬಳಸುವ ಆಕರ್ಷಣೆಯನ್ನು ಬೆಳೆಸಿಕೊಂಡ. ಮೋಟರುಗಳ ಗೇರುಗಳ ಕಾರ್ಯವೈಖರಿ ಅವುಗಳ ವಿನ್ಯಾಸ ಮುಂತಾದ ತಾಂತ್ರಿಕ ಮಾಹಿತಿಗಳು ಆತನಿಗೆ ಕರತಲಾಮಲಕವಾಗಿದ್ದವು.

ಜನರಿಗೆ ಆತನ ಈ ವೈಖರಿ ವಿಚಿತ್ರವೆಂದು ತೋರಿದರೆ ಆತನಿಗೆ ಇದು ಸಹಜವಾದ ಪ್ರವೃತ್ತಿಯಾಗಿತ್ತು. ರವಿ ಕಾಣದ್ದನ್ನು ಕವಿ ಕಾಣುತ್ತಾನೆ ಕವಿ ಕಾಣದ್ದನ್ನು ತಾಂತ್ರಿಕ ಕಾಣುತ್ತಾನೆ ಎಂಬಂತೆ ಯಂತ್ರಗಳ ಕುರಿತು ಆಕರ್ಷಣೆಯನ್ನು ಬೆಳೆಸಿಕೊಂಡ ಈ ವ್ಯಕ್ತಿ ಕಂಡಿದ್ದ. ಮಶೀನುಗಳೊಂದಿಗೆ ಆಟವಾಡುತ್ತಲೇ ಅವುಗಳಲ್ಲಿನ ಜೀವಂತಿಕೆಯನ್ನು ಗುರುತಿಸಿದ ಆತ.

ಮುಂದೆ ವಾಹನದ ಬಿಡಿಭಾಗಗಳನ್ನು ಮಾರಾಟ ಮಾಡುವ ಸೇಲ್ಸ್ ಉದ್ಯೋಗಿಯಾಗಿ, ಕಾರ್ಮಿಕನಾಗಿ ಮೋಟಾರು ಕಾರು ತಯಾರಿಕಾ ಕಂಪನಿಯಲ್ಲಿ ಕಾರ್ಯನಿರ್ವಹಿಸಿದ. ಆತ ನಿರ್ಮಿಸಿದ ಮೊದಲ ಕಾರಿನ ಮಾದರಿ ವಿಫಲವಾಯಿತು. ಆತ ಕೆಲಸ ನಿರ್ವಹಿಸುತ್ತಿದ್ದ ಕಂಪನಿಯು ಕೂಡ ಮುಚ್ಚಿಹೋಯಿತು. ಆತನ ಕಂಪನಿಗೆ ಹೂಡಿಕೆ ಮಾಡುತ್ತಿದ್ದ ಹೂಡಿಕೆದಾರರು, ಸ್ನೇಹಿತರು ಆತನಿಂದ ದೂರವಾದರು. ಆತನ ಆರೋಗ್ಯವು ಕೂಡ ಆತನಿಗೆ ಕೈಕೊಟ್ಟಿತು. ಆದರೆ ಆತನ ಛಲ ಮತ್ತು ನಿರಂತರವಾದ ಬದ್ಧತೆ ಆತನೊಂದಿಗೆ ಸದಾ ಇದ್ದುದರ ಪರಿಣಾಮವಾಗಿ ಆತನೆಂದೂ ಹಿಂದೆ ಸರಿಯಲಿಲ್ಲ. ಕಾರಣ ಆತನ ಮಹತ್ವಕಾಂಕ್ಷೆ ಇದ್ದುದು ಐಶಾರಾಮದ ಜೀವನದಲ್ಲಲ್ಲ ಬದಲಾಗಿ ಜನಸಾಮಾನ್ಯರು ಕೂಡ ಸರಳವಾಗಿ ಖರೀದಿಸಲು ಸಾಧ್ಯವಾಗುವ ಮತ್ತು ಆರಾಮದಾಯಕವಾಗಿ ಬಳಸುವ ವಾಹನವನ್ನು ನಿರ್ಮಿಸುವುದರಲ್ಲಿತ್ತು.. ಆತನ ನಿರಂತರ ಪರಿಶ್ರಮದ ಫಲವಾಗಿ ಅಂತಿಮವಾಗಿ ರೂಪುಗೊಂಡದ್ದು ಮಾಡೆಲ್ ಟಿ.

ಆತನ ಸಂಶೋಧನೆ ಕೇವಲ ಜನರ ಪಯಣವನ್ನು ನಿರ್ಧರಿಸಲಿಲ್ಲ ಬದಲಾಗಿ ಮೋಟಾರ್ ಕಾರು ತಯಾರಿಕಾ ಜಗತ್ತಿನ ಕಾರ್ಯವೈಖರಿಯನ್ನು ಬದಲಿಸಿತು. ವಾಹನ ತಯಾರಿಕೆಯಲ್ಲಿ ಬಿಡಿ ಭಾಗಗಳನ್ನು ಜೋಡಿಸುವ ನಿಟ್ಟಿನಲ್ಲಿ ಆತ ಕೈಗೊಂಡ ಸುಧಾರಿತ ಕ್ರಮಗಳು ಕ್ರಾಂತಿಕಾರಕ ಉತ್ಪಾದನಾ ಶೈಲಿ, ಕಡಿಮೆ ಬೆಲೆಯ ಕಾರುಗಳು ಮತ್ತು ಕಾರ್ಮಿಕರಿಗೆ ದೊರೆತ ಹೆಚ್ಚಿನ ಸಂಬಳ ಕಾರು ತಯಾರಿಕಾ ಉದ್ಯಮದಲ್ಲಿ ಕ್ಷಿಪ್ರ ಕ್ರಾಂತಿಯನ್ನು ಮಾಡಿದವು. ಅತ್ಯಂತ ವೇಗವಾಗಿ ಓಡುವ ಕಾರ್ಯಕ್ಷಮ ತೆಯನ್ನು ಹೊಂದಿರುವ ಮತ್ತು ಎಲ್ಲರ ಕೈಗೆಟಕುವ ಕಡಿಮೆ ಬೆಲೆಯ ಕಾರುಗಳು ಅತ್ಯಂತ ಕಡಿಮೆ ಸಮಯದಲ್ಲಿ ರಸ್ತೆಯಲ್ಲಿ ಓಡಾಡಲಾರಂಭಿಸಿದವು.

ಆಮೆ ವೇಗದಲ್ಲಿ ನಡೆಯುತ್ತಿದ್ದ ಇನ್ನಿತರ ಕಾರು ತಯಾರಿಕಾ ಕಂಪನಿಗಳು ಮೊದಮೊದಲು ಆತನನ್ನು ಅಜಾಗರೂಕ, ಜವಾಬ್ದಾರಿ ಇಲ್ಲದವ, ಮತಿಗೇಡಿ ಎಂದೆಲ್ಲ ಹೀಯಾಳಿಸಿದರೂ ಮುಂದೆ ಆತನ ಕೆಲಸವನ್ನು ನಕಲು ಮಾಡಿದವು.

ಪ್ರಾರಂಭದಲ್ಲಿ ಸಾಕಷ್ಟು ಹರತಾಳಗಳು, ವಿದ್ವಂಸಕ ಕೃತ್ಯಗಳು, ಬೆದರಿಕೆಗಳು ಬಹಿಷ್ಕಾರಗಳನ್ನು ಆತನ ಮೇಲೆ ಹೇರಿದರೂ. ಕೆಲವು ಧನಾತ್ಮಕ ಟೀಕೆಗಳಾಗಿದ್ದರೂ ಮತ್ತೆ ಕೆಲವು ಟೀಕೆಗಳು ದಿಢೀರ್ ಬದಲಾವಣೆಯಿಂದ ಮಾರುಕಟ್ಟೆಯನ್ನು ಕಳೆದುಕೊಳ್ಳುವ ಕಾರಣಕ್ಕೆ ಉಂಟಾದ ಭಯದಿಂದ ಉಂಟಾಗಿದ್ದವು.



ವೀಣಾ ಹೇಮಂತಗೌಡ ಪಾಟೀಲ್
ಲೇಖಕರು, ಮುಂಡರಗಿ, ಗದಗ

Scan For Digital Colourful
HAMPI TIMES E-paper

ಆದರೆ ಆತನಿಗೆ ಮಾತ್ರ ಎಲ್ಲಾ ಸವಾಲುಗಳು ಇಂಧನದಂತೆ ಕಾರ್ಯ ನಿರ್ವಹಿಸಿದವು. ಯಾವುದೇನವೀನಸಂಶೋಧನೆಗಳು ಸುರಕ್ಷತೆಯ ವರ್ತುಲ ದೊಳಗೆ ಮೂಡಿ ಬರುವುದಿಲ್ಲ... ದಿನಗಟ್ಟಲೆ ಕೈಗೆ ಮೆತ್ತಿದ ಗ್ರೀಸ್ ಬೆಂಕಿಗೆ ಒಡ್ಡಿದಂತಹ ಮೆದುಳಿನ ಕೆಲಸ, ಎಂದೂ ಬತ್ತದ ಉತ್ಸಾಹ, ಹಿಮ್ಮೆಟ್ಟದ ಸಾಹಸ ಮತ್ತು ಅಪಾರ ಬದ್ಧತೆಯ ಪರಿಣಾಮವೇ ಇತಿಹಾಸವನ್ನು ಸೃಷ್ಟಿ ಮಾಡಿತು. ಮೋಟಾರ್ ವಾಹನ ತಯಾರಿಕಾ ಕ್ಷೇತ್ರದಲ್ಲಿ ಅತಿ ದೊಡ್ಡ ಸಾಧನೆ ಮಾಡಲು ಆತನಿಗೆ ಸಾಧ್ಯವಾಗಿಸಿದ್ದು ಇದೇ ಬದ್ಧತೆ ಎಂಬುದು ನಿರ್ವಿವಾದ.

ಕಾರು ನಿರ್ಮಾಣ ಫ್ಯಾಕ್ಟರಿಯಲ್ಲಿ ಉಂಟಾದ ಭಯಾನಕ ಬೆಂಕಿ ಅಪಘಾತದಲ್ಲಿ ಸ್ನೇಹಿತ ದುರ್ಮರಣ ಹೊಂದಿದ್ದು ಆತನಲ್ಲಿ ಮಾನಸಿಕವಾಗಿ ತೊಂದರೆಯನ್ನು ಉಂಟು ಮಾಡಿ ಕೊಂಚ ಹಿನ್ನಡೆಯನ್ನು ತಂದರೂ ಶೀಘ್ರವೇ ಚೇತರಿಸಿಕೊಂಡು ತನ್ನಲ್ಲಿನ ಬದಲಾವಣೆಗೆ ಕಾರಣನಾದನು ಆತ. ತಾನು ನಿರ್ಮಿಸಿದ ವಸ್ತು ಜನರ ಜೀವನ ಮಟ್ಟವನ್ನು ಸುಧಾರಿಸುವ ನಿಟ್ಟಿನಲ್ಲಿ ವಿಫಲವಾದರೆ ಅಂತಹ ವಸ್ತುವನ್ನು ತಯಾರಿಸುವುದರ ಪ್ರಯೋಜನ ವೇನು? ಎಂಬ ಪ್ರಶ್ನೆ ಆತನನ್ನು ದಣಿವರಿಯದಂತೆ ಕೆಲಸ ಮಾಡಲು ಪ್ರೇರೇಪಿಸುತ್ತಿತ್ತು. ಈ ಪ್ರಶ್ನೆ ಆತನಲ್ಲಿ ಉಂಟಾದ ದಿನದಿಂದಲೇ ಆತನ ಎಲ್ಲ ನಿರ್ಣಯಗಳನ್ನು ಸಾಮಾನ್ಯ ಜನರಿಗಾಗಿ, ತನ್ನ ಬಳಿ ಕೆಲಸ ಮಾಡುವ ಕೆಲಸಗಾರರಿಗಾಗಿ, ಮತ್ತು ಅವರ ಕುಟುಂಬದವರ ಕ್ಷೇಮಾಭಿವೃದ್ಧಿಗಾಗಿ ಮತ್ತು ಮೋಟಾರ್ ವಾಹನ ತಯಾರಿಕಾ ಕ್ಷೇತ್ರದ ಉತ್ತಮ ಭವಿಷ್ಯಕ್ಕಾಗಿ ಮೀಸಲಾಗಿಟ್ಟನು.

ಸೋಲುಗಳು ಆತನನ್ನು ಕಂಗಡಿಸಲಿಲ್ಲ ಮತ್ತು ತಡೆಯಲಿಲ್ಲ. ಸೋಲು, ಅವಮಾನಗಳು ಆತನ ಕಾರು ತಯಾರಿಕಾ ನೀಲನಕ್ಷೆಯ ಭಾಗಗಳೇ ಆಗಿದ್ದವು ಎಂದರೆ ಅತಿಶಯೋಕ್ತಿಯೇನಲ್ಲ.

ಆತನೇ ಒಂದು ಇಡೀ ಜೀವಮಾನದ ಸೋಲು, ಅವಮಾನ, ಬೆದರಿಕೆಗಳನ್ನು ಎದುರಿಸಿ ತನ್ನ ಕಾರ್ಯ ಕ್ಷೇತ್ರದಲ್ಲಿ ಅತಿ ದೊಡ್ಡ ಹೆಸರನ್ನು ಮಾಡಿರುವ ಇಂದಿಗೂ ಜಗತ್ತಿನ ಕಾರು ತಯಾರಿಕಾ ಕ್ಷೇತ್ರದಲ್ಲಿ ಮುಂಚೂಣಿಯಲ್ಲಿರುವ ಫೋರ್ಡ್ ಕಂಪನಿಯ ಜನಕ ಹೆನ್ರಿ ಫೋರ್ಡ್.

ಆತ ಕೇವಲ ಕಾರುಗಳನ್ನು ನಿರ್ಮಿಸಲಿಲ್ಲ ಆತ ಕಾರು ತಯಾರಿಕಾ ಕ್ಷೇತ್ರದಲ್ಲಿ ಒಂದು ಚಳುವಳಿಯನ್ನೇ ಆರಂಭಿಸಿ ಯಶಸ್ವಿಯಾದ.

ಸ್ನೇಹಿತರೆ.....ಪ್ರತಿಯೊಂದು ಯಶಸ್ಸಿನ ಹಿಂದೆಯೂ ಅಪಾರ ಪರಿಶ್ರಮ ನೋವು ಬದ್ಧತೆಗಳು ಇರುತ್ತವೆ. ಯಶಸ್ವಿಗೆ ಕೇವಲ ಅದೃಷ್ಟ ಮಾತ್ರ ಕಾರಣವಲ್ಲ .... ಅದೃಷ್ಟದ ಪಾಲು ಸಾವಿರದಲ್ಲಿ ಒಂದು ಮಾತ್ರ. ಈ ಯಶಸ್ಸನ್ನು ಪಡೆಯಲು ತಮ್ಮ ಕಾರ್ಯಕ್ಷೇತ್ರದಲ್ಲಿ ಅವರು ಸವೆಸಿರುವ ಹತ್ತು ಹಲವು ಪ್ರಯತ್ನಗಳು, ಹಗಲು ಇರುಳೆನ್ನದೆ ದಣಿವರಿಯದೆ ಮಾಡಿದ ಕೆಲಸಗಳು, ಅಪಾರ ಮನೋ ದೈಹಿಕ ಕಷ್ಟ ನಷ್ಟಗಳು ಅವರ ಇಂದಿನ ಯಶಸ್ವಿಗೆ ಕಾರಣವಾಗಿರುತ್ತದೆ.

ಬಹಳಷ್ಟು ಬಾರಿ ಯಶಸ್ವಿ ವ್ಯಕ್ತಿಗಳ ಪರಿಶ್ರಮವನ್ನು ಅಸಡ್ಡೆ ಮಾಡುವ, ಅವರನ್ನು ಪರಿಹಾಸ್ಯ ಮಾಡಿ ವಿಕೃತ ಸಂತೋಷಪಡುವ ಜನರ ಗುಂಪೇ ಇರುತ್ತದೆ. ಸರೋವರದಲ್ಲಿ ಪ್ರಶಾಂತವಾಗಿ ತೇಲುತ್ತಿರುವ ಬಾತು ಕೋಳಿಯಂತೆ ಅವರ ಜೀವನ. ಮೇಲೆ ನೆಮ್ಮದಿಯಿಂದ ಪ್ರಶಾಂತವಾಗಿ ತೇಲುತ್ತಿರುವಂತೆ ಕಂಡರೂ ನೀರಿನಲ್ಲಿ ಒಂದೇ ಸಮನೆ ಕಾಲುಗಳನ್ನು ಬಡಿದು ತನ್ನ ಚಲನಶೀಲತೆಯನ್ನು ಕಾಯ್ದುಕೊಳ್ಳುವ ಬಾತುಕೋಳಿಯ ಶ್ರಮ ನಮ್ಮ ಕಣ್ಣಿಗೆ ಕಾಣದು.... ಇನ್ನು ಯಶಸ್ವಿ ವ್ಯಕ್ತಿಗಳ ಶ್ರಮ ಕಂಡೀತೇ?

ನಾವು ಬೆಚ್ಚಗೆ ಮಲಗಿ ಕನಸು ಕಾಣುತ್ತಿರುವಾಗ ಅವರು ತಮ್ಮ ಕನಸಿನ ಸಾಕಾರಕ್ಕಾಗಿ ಹಗಲಿರುಳೆನ್ನದೆ ದುಡಿದು ದಣಿಯುತ್ತಾರೆ. ನಾವು ಸ್ನೇಹಿತರು ಮೋಜು ಮಸ್ತಿ ಎಂದು ಐಷಾರಾಮಿ ಭೋಗ ಲಾಲಸೆಗಳಲ್ಲಿ ಮುಳುಗಿರುವಾಗಅವರುಕಣ್ಣಿಗೆಎಣ್ಣೆಬಿಟ್ಟುಕೊಂಡವರಂತೆ ತಮ್ಮ ಕೆಲಸದ ಪ್ರಗತಿಗಾಗಿ ಕಾರ್ಯನಿರ್ವಹಿಸುತ್ತಾರೆ.

ಅಂತಹವರ ಪರಿಶ್ರಮವನ್ನು, ತಾಳ್ಮೆಯನ್ನು, ಪರಿಣಿತಿಯನ್ನು ಎಂದಿಗೂ ಹೀಗಳೆಯಬೇಡಿ...... ಸಾಧ್ಯವಾದರೆ ಪ್ರೋತ್ಸಾಹಿಸಿ ಇಲ್ಲವಾದರೆ ಸುಮ್ಮನಿದ್ದು ಬಿಡಿ ಅದೊಂದೇ ನೀವು ಅವರಿಗೆ ಮಾಡಬಹುದಾದ ಬಹುದೊಡ್ಡ ಉಪಕಾರ.... ಏನಂತೀರಾ?

# ಮಾನವೀಯತೆ ಮೆರೆದಿದ್ದರೆ ಉಳಿಯುತ್ತಿತ್ತು ಜೀವ

ಇತ್ತೀಚಿಗೆ ಹಲವಾರು ಮಾಧ್ಯಮಗಳಲ್ಲಿ ಪ್ರಕಟಗೊಂಡ ಒಂದು ಸುದ್ದಿ ಓದಿ ಕರಳು ಕಿವಿಚಿದಂತಾಗಿತ್ತು.

ನಾಲ್ಕೈದು ದಿನಗಳ ಹಿಂದೆ ಬಂಗಾಳದ ಮೇದಿನಿಪುರದ ಜಿಲ್ಲೆಯ ಪನ್ಸುರಾ ಎಂಬ ಹಳ್ಳಿಯಲ್ಲಿ ಏಳನೇ ತರಗತಿ ವಿದ್ಯಾರ್ಥಿಗೆ ಅಂಗಡಿ ಮಾಲೀಕ ತನ್ನ ಅಂಗಡಿಯಲ್ಲಿ ಚಿಪ್ಸ್ ಕದ್ದಿದ್ದಾನೆಂದು ಸಾರ್ವಜನಿಕವಾಗಿ ಕಪಾಳ ಮೋಕ್ಷ ಮಾಡಿ ಬಕ್ಷಿ ಹೊಡಿಸಿದ್ದರಿಂದ ಮನನೊಂದ ವಿದ್ಯಾರ್ಥಿ ಮನೆಗೆ ಆಗಮಿಸಿ ತನ್ನ ಕೋಣೆಯಲ್ಲಿ 'ಅಮ್ಮಾ ನಾನು ಚಿಪ್ಸ್ ಕದ್ದಿಲ್ಲ' ಎಂದು ಡೆತ್ ನೋಟ್ ಬರೆದಿಟ್ಟು ಆತ್ಮಹತ್ಯೆ ಮಾಡಿಕೊಂಡಿದ್ದಾನೆ.

ನಡೆದ ಘಟನೆ ಏನೆಂದರೆ ಅವನು ಚಿಪ್ಸ್ ಕೊಳ್ಳಲು ಅಂಗಡಿಗೆ ತೆರಳಿರುತ್ತಾನೆ ಅಂಗಡಿ ಮಾಲೀಕ ಯಾರು ಇಲ್ಲದಿದ್ದಾಗ, ಚಿಪ್ಸ್ ಯಾರು ಕೊಡದೆ ಇದ್ದಾಗ ಅಲ್ಲೇ ಇಟ್ಟಿದ್ದ ಚಿಪ್ಸ್ ಪ್ಯಾಕೆಟ್ ತೆಗೆದುಕೊಂಡು ಬಂದಿದ್ದಾನೆ ಅಂಗಡಿ ಮಾಲೀಕ ಬಂದು ಕೇಳಿದಾಗ 15 ರೂಪಾಯಿ ಚಿಪ್ಸ್‌ಗೆ ರೂ. 20 ಹಣ ಕೊಟ್ಟರು ಅವರು ತೋರಿಸಿದ ಕೆಟ್ಟ ವರ್ತನೆಯಿಂದ ಮನನೊಂದು ಈ ಮೇಲಿನ ಘಟನೆ ನಡೆದಿದೆ.

ಈ ಘಟನೆಯನ್ನು ಸೂಕ್ಷ್ಮವಾಗಿ ಅವಲೋಕಿಸಿದಾಗ ಆ ಮಗು ತುಂಬಾ ಸೆನ್ಸಿಟಿವ್ ಎನ್ನುವುದು ಅರ್ಥವಾಗುತ್ತದೆ. ಈ ದುರ್ಘಟನೆ ತಡೆಯಲು ಒಂದು ಅಂಗಡಿ ಮಾಲೀಕ ತಪ್ಪನ್ನು ಕ್ಷಮಿಸಿ ಬುದ್ಧಿವಾದ ಹೇಳಬಹುದಿತ್ತು ಇನ್ನೊಂದು ಈ ಘಟನೆ ವೀಕ್ಷಿಸುತ್ತಿದ್ದ ಅಲ್ಲಿನ ಜನರು ಮಧ್ಯ ಪ್ರವೇಶಿಸಿ ಮಾಲೀಕ ಆ ರೀತಿ ವರ್ತಿಸದಂತೆ ತಡೆಯಬಹುದಿತ್ತು ಈ ಮೇಲ್ಕಂತೆ ವರ್ತಿಸಿದ್ದಾರೆ ಆ ಮಗು ಬದುಕುಳಿಯುತ್ತಿತ್ತು.

ಕೆಲ ವಿದ್ಯಾರ್ಥಿಗಳು ತುಂಬಾ ಹಠ ಸ್ವಭಾವದ ಮಾತು ಕೇಳದ, ಪೋಷಕರು ಎಷ್ಟೇ ಬೈದು ಹೊಡೆದರು ಬದಲಾಗದ ಮನಸ್ಥಿತಿ ಉಳ್ಳವರಾಗಿರುತ್ತಾರೆ, ಈ ಮನಸ್ಥಿತಿ ಇದ್ದರೆ ಆ ಮಗು ಮೇಲಿನ ಘಟನೆಗೆ ಕ್ಯಾರೆ ಅನ್ನುತ್ತಿರಲಿಲ್ಲ ಬಹುಶಃ ಈ ರೀತಿ ನಿರ್ಧಾರ ಕೈಗೊಳ್ಳುತ್ತಿರಲಿಲ್ಲ.


ಇನ್ನೊಂದು ಮನಸ್ಥಿತಿ ಮಕ್ಕಳು ಇರುತ್ತಾರೆ ಅವರಿಗೆ ಯಾರೇ ಬೈದರು, ಅವಮಾನ ಮಾಡಿದರು ಸಹಿಸಿಕೊಳ್ಳದೆ ತುಂಬಾ ಮನನೊಂದುಬಿಡುತ್ತಾರೆ. ಇಂಥವರ ವಿಷಯದಲ್ಲಿ ತುಂಬಾ ಜಾಗೃತರಾಗಿರಬೇಕು. ಅದರಲ್ಲಿ ಸಮಾಜ ಎಡೆವಿದ್ದರಿಂದ ಮಗು ಪ್ರಾಣ ಬಿಟ್ಟಿದೆ.

ಬಾಲ್ಯದ ಮನಸ್ಸಿಗೆ ವಸ್ತುವಿನ ಮೇಲೆ ಇರುವ ಪ್ರೀತಿಯು ಆ ವಸ್ತುವನ್ನು ಹೇಗಾದರೂ ಪಡೆದುಕೊಳ್ಳಬೇಕು ಎಂಬ ಮನೋಭಾವ ಇರುತ್ತದೆ ಹೊರತು ಕಳ್ಳತನದ,ಅಪರಾಧ ಮನೋಭಾವದ, ಸ್ಥಿತಿ ಮೂಡುವುದಿಲ್ಲ.

ನಮ್ಮ ಬಾಲ್ಯದ ದಿನಗಳನ್ನೇ ಗಮನಿಸಿದಾಗ ಜಾತ್ರೆ ಉತ್ಸವಗಳಲ್ಲಿ ಆಟಿಕೆ ಗೊಂಬೆಗಳ ಮೇಲಿನ ಪ್ರೀತಿಯಿಂದ, ಅಂಗಡಿಗಳಲ್ಲಿ ಕದ್ದು ಆಡಿಲ್ಲವೇನು? ಮಿಠಾಯಿ ಐಸ್ ಕ್ಯಾಂಡಿಯವರ ಪೀಪಿ ಕೂಗಿಗೆ ಸಾಸಿವೆ ಡಬ್ಬದಲ್ಲಿನ ಚಿಲ್ಲರೆ ಕಾಸಗಿ ಕೈ ಹಾಕಿಲ್ಲವೇನು? ಸಿಹಿಯಾದ ಮಾವಿನ ಹಣ್ಣಿನ ಮೋಹಕ್ಕೆ ಬೇರೆಯವರ ತೋಟಕ್ಕೆ ನುಗ್ಗಿ ಕಲ್ಲೆಸೆದು ಕೈಯಲೆರಡು ಜೇಬಲ್ಲೆರಡು ಇಟ್ಟುಕೊಂಡು ಓಡಿ ಬಂದು ಸವಿದಿಲ್ಲವೇನು? ಹೈಸ್ಕೂಲಾ ಓದುವ ಸಮಯಕ್ಕೆ ಬೇರೆಯವರ ತೋಟಗಳಲ್ಲಿ ಎಳೆನೀರು ಕಿತ್ತದ್ದು, ಕಬ್ಬು ಮುರಿದು ತಿಂದದ್ದು, ಗೋವಿನ ಜೋಳ ಕಿತ್ತಿದ್ದ ಕಂಪ್ಲೇಟ್ಟು ನಮ್ಮ ಶಾಲೆಯ ಮುಖ್ಯ ಗುರುಗಳಿಗೆ ಕಿವಿಗೆ ಮುಟ್ಟಿ ನೂರಾರು ವಿದ್ಯಾರ್ಥಿಗಳೇ ಮುಂದೆ ಅವಮಾನಿಸಿ ಹೊಡೆದಿದ್ದಕ್ಕೆ ನಮಗೆ ಆ ಕ್ಷಣಕ್ಕೆ ದುಃಖವಾಯಿತೆ ಹೊರತು ಮತ್ತೊಂದು ದಿನ ಆ ವಿಷಯವನ್ನೇ ಮರೆತುಬಿಟ್ಟೆವು.

ಕಾಲ ಬದಲಾಗಿದೆ ಮಕ್ಕಳು ಸಹ ತುಂಬಾ ಸೂಕ್ಷ್ಮಮತಿ ಗಳಾಗಿದ್ದಾರೆ ಪೋಷಕರು, ಸಮುದಾಯ ಅವರ ವಿಷಯಗಳಲ್ಲಿ ತುಂಬಾ ಜಾಗರೂಕರಗಿರಬೇಕು.

ಇಂಥ ಘಟನೆಗಳನ್ನು ತುಂಬಾ ಸೂಕ್ಷ್ಮವಾಗಿ ನಿರ್ವಹಿ ಸಬೇಕು ತುಂಬಾ ಕಟ್ಟುನಿಟ್ಟಾಗಿ ವರ್ತಿಸಿದರೆ ಈ ಮೇಲಿನಂತೆ ದುರ್ಘಟನೆಗಳು ಸಂಭವಿಸಬಹುದು. ಆಲಕ್ಷಿಸಿದರೆ ಇದೇ ಗುಣ ಚಟವಾಗಿ ಬೆಳೆದು ಮುಂದೆ ನಿಮ್ಮ ಮರ್ಯಾದೆ ಮಣ್ಣು ಪಾಲಾಗಬಹುದು.



ಶಿವಣ್ಣ ಶಿಕ್ಷಕರು
ಗಾಣಗಟ್ಟೆ ಕೂಡ್ಲಿಗಿ

Scan For Digital Colourful
HAMPI TIMES E-paper

ನಮ್ಮ ಶಾಲೆಯಲ್ಲೂ ಇದೆ ರೀತಿ ಒಂದು ಘಟನೆ ನಡೆದಿತ್ತು ಮಕ್ಕಳ ಗೈರು ಹಾಜರಿಯನ್ನು ತಡೆಯಲು ಶಾಲೆ ತಪ್ಪಿಸುವ ಮಕ್ಕಳಿಗೆ ಒಂದರಿಂದ ಎರಡು ರೂಪಾಯಿ ದಂಡ ವಿಧಿಸಲಾಗುತ್ತಿತ್ತು. ಆ ಹಣವನ್ನು ಒಂದು ಪೆಟ್ಟಿಗೆಯಲ್ಲಿ ತರಗತಿಯ ನಾಯಕರ ನೇತೃತ್ವದಲ್ಲಿ ಮುಖ್ಯ ಶಿಕ್ಷಕರ ಕೋಣೆಯ ಕಪಾಟುವಿನಲ್ಲಿ ಇಡಲಾಗುತ್ತಿತ್ತು..

ಒಂದು ದಿನ ಕೆಲವು ಮಕ್ಕಳು ಶಾಲೆ ಬಿಡುವ ಹೊತ್ತಿಗೆ ತರಗತಿ ಕೋಣೆಗಳನ್ನು ಒಳಗೊಂಡಂತೆ ಮುಖ್ಯ ಶಿಕ್ಷಕರ ಕೊಠಡಿಯ ಕಿಟಕಿಗಳನ್ನು ಮುಚ್ಚಿ ಬಾಗಿಲು ಬೀಗ ಹಾಕಿದ್ದರು. ಮರು ದಿನ ಬೆಳಿಗ್ಗೆ ಸಂಗ್ರಹಿಸಿದ್ದ ಹಣದ ಪೆಟ್ಟಿಗೆ ಕಾಣೆಯಾಗಿತ್ತು. ಈ ರೀತಿಯ ಕಳವಿನ ಘಟನೆ ಹಲವು ಬಾರಿ ನಡೆದಿತ್ತು. ಈ ಬಾರಿ ಹೀಗೆ ಬಿಡುವುದು ಬೇಡ ಎಂದು ನಿರ್ಧರಿಸಿದೆವು ನಾನೇ ಈ ವಿಷಯದಲ್ಲಿ ಮುಂಚೂಣಿಯಲ್ಲಿ ನಿಂತು ಏಕೆ ಕಳ್ಳತನವಾಗಿದೆ? ಯಾರು ಮಾಡಿದ್ದಾರೆ ಎಂಬುದನ್ನು ಪತ್ತೆಹಚ್ಚಲು ನಿರ್ಧರಿಸಿದೆನು. ಲೈಬ್ರರಿ ಕೋಣೆಯಲ್ಲಿ ಪುಸ್ತಕಗಳನ್ನು ಜೋಡಿಸುತ್ತಿರುವ ಸಂದರ್ಭದಲ್ಲಿ ಕತ್ತರಿಸಿದ ಸ್ಥಿತಿಯಲ್ಲಿ ಹಣ ಸಂಗ್ರಹಿಸುವ ಡಬ್ಬಿ ಪುಸ್ತಕದ ಕಪಾಟುವಿನ ಹಿಂದೆ ಬಿದ್ದದ್ದು ಕಂಡುಬಂದಿತ್ತು.


ಎರಡು ದಿನಗಳ ಹಿಂದೆ ಕೆಲವು ವಿದ್ಯಾರ್ಥಿಗಳು ಲೈಬ್ರರಿಯಲ್ಲಿ ಏನು ಮಾಡುತ್ತಿದ್ದರು ಎಂಬ ಸುದ್ದಿ ಬೇರೆ ವಿದ್ಯಾರ್ಥಿಗಳಿಂದ ತಿಳಿದುಬಂದಿತು. ನಮಗೆ ಯಾರು ಕದ್ದಿದ್ದಾರೆ ಎಂಬ ವಿಷಯ ಒಂದೇ ದಿನದಲ್ಲಿ ಗೊತ್ತಾಗಿತ್ತು?

ನಾನು ಈ ವಿಷಯದ ಕುರಿತು ಯಾವುದೇ ರೀತಿ ವಿದ್ಯಾರ್ಥಿಗಳಿಗೆ ಗಮನಕ್ಕೆ ಬಾರದಂತೆ ತರಗತಿ ಕೋಣೆಯಲ್ಲಿ ಆ ಮಕ್ಕಳನ್ನು ವಿಚಾರಿಸಿದೆ ವೈಯಕ್ತಿಕವಾಗಿ ಒಬ್ಬೊಬ್ಬೊರನ್ನೇ ಆಟದ ಸಮಯದಲ್ಲಿ ನಾನೇ ಅವರನ್ನು ವಿಚಾರಿಸುತ್ತ ನಾಲ್ಕೈದು ವಿದ್ಯಾರ್ಥಿಗಳಿಂದ ಕೂಡಿದ ಗುಂಪು ಈ ಕೆಲಸದಲ್ಲಿ ಭಾಗಿಯಾಗಿದ್ದು ತಿಳಿದುಬಂದಿತು. ನಾನು ಯಾವುದೇ ಕಾರಣಕ್ಕೂ ನೀನು ಕಳ್ಳತನ ಮಾಡಿದ್ದೀಯಾ ನೀನೇ ಕಳ್ಳ ಎಂದು ಅವರಿಗೆ ಹೇಳಲೇ ಇಲ್ಲ ಜೊತೆಗೆ ಪ್ರೇಯರ್ ಸಮಯದಲ್ಲಿ ಅಥವಾ ತರಗತಿ ಕೋಣೆಯ ಎಲ್ಲ ವಿದ್ಯಾರ್ಥಿಗಳ ಇರುವ ಸಮಯದಲ್ಲಿ ಯಾವುದೇ ಕಾರಣಕ್ಕೂ ವಿಚಾರಣೆ ಮಾಡಬಾರದು ಹಾಗೇನಾದರೂ ಮಾಡಿದರೆ ಅವರ ಮೇಲೆ ಅವರ ಮನಸ್ಸಿನ ಮೇಲೆ ಗಂಭೀರ ಪ್ರಭಾವ ಬೀರಿ ದುರ್ಘಟನೆಗಳಿಗೆ ಕಾರಣವಾಗುತ್ತಿತ್ತು. ಈ ರೀತಿ ನಾವು ಕಳ್ಳತನವಾಗುತ್ತಿದ್ದರು ನೋಡಿಕೊಂಡು ಕೂತಿದ್ದರೆ ಮತ್ತೆ ಇದೇ ರೀತಿ ಪ್ರಕರಣಗಳು ಕಂಡುಬರುತ್ತಿದ್ದವು. ನಮ್ಮ ಅರಿವಿಗೆ ಬಂದಾಕ್ಷಣ ನಾವು ಕೈಗೊಂಡ ಕ್ರಮದಿಂದ ಒಂದು ವರ್ಷದಿಂದ ಈ ರೀತಿಯ ಪ್ರಕರಣಗಳು ನಮ್ಮಲ್ಲಿ ಕಂಡು ಬರುತ್ತಿಲ್ಲ.

ಮಕ್ಕಳ ಮನಸ್ಸು ಮೃದು ಅವರಿಗೆ ತಪ್ಪು ಒಪ್ಪುಗಳ ಅರಿವಿರುವುದಿಲ್ಲ ಮಾಡಿದ ಸಣ್ಣ ಸಣ್ಣ ತಪ್ಪುಗಳಿಗೆ, ಹೇಳಿದ ಸಣ್ಣ ಸಣ್ಣ ಸುಳ್ಳುಗಳಿಗೆ ತುಂಬಾ ಮೃದು ಸ್ವಭಾವದಿಂದ ಸ್ನೇಹಿತರಂತೆ ತಿದ್ದಿ ಸರಿ ದಾರಿಯೆಡೆಗೆ ಕೈಹಿಡಿದು ನಡೆಸಬೇಕು. ನೀನು ಕಳ್ಳ ನೀನು ಸುಳ್ಳ ಎಂದಾಗ ಅವರ ಮನಸ್ಸಿಗೆ ನಾಟುತ್ತದೆ ಅದನ್ನು ತಡೆದುಕೊಳ್ಳುವ ಸಂವೇದನಾ ಶೀಲತೆ ಕಳೆದುಕೊಂಡಾಗ ಈ ರೀತಿ ಘಟನೆಗಳಿಂದ ಸ್ಫೋಟಗೊಂಡು ತಪ್ಪು ನಿರ್ಧಾರಗಳನ್ನುಕೈಗೊಳ್ಳುತ್ತಾರೆಇದನ್ನುಅರ್ಥೈಸಿಕೊಂಡು ಕ್ಷಮಿಸುವ ಹೊತ್ತಿಗೆ ಕಾಲ ಮಿಂಚಿ ಹೋಗಿರುತ್ತದೆ.

ಮೇಲಿನ ಘಟನೆಯಲ್ಲಿ ಅಂಗಡಿ ಮಾಲೀಕ ಜವಾಬ್ದಾರಿಯುತವಾಗಿ ವರ್ತಿಸಿದ್ದಾರೆ ಈ ಘಟನೆ ನಡೆಯುತ್ತಿರಲಿಲ್ಲ.

ಹಾಗಾಗಿ ಪೋಷಕರು,ಒಡನಾಡಿಗಳು ಸಮುದಾಯವು, ಈ ಪೀಳಿಗೆಯ ಮಕ್ಕಳ ಮನಸ್ಥಿತಿಯನ್ನು ಅರ್ಥೈಸಿಕೊಂಡು ಅವರು ಕೋಪಗೊಳ್ಳದಂತೆ ಅವರ ಹಾದಿಯಲ್ಲಿಳಿದು ಮನಸ್ಥಿತಿಯನ್ನು ಬದಲಿಸಬೇಕು. ಹಾಗಾದಾಗ ಮಾತ್ರ ಈ ರೀತಿಯ ದುರ್ಘಟನೆಗಳನ್ನು ತಡೆಯಲು ಸಾಧ್ಯವಾಗುತ್ತದೆ ಇಲ್ಲದಿದ್ದರೆ ದಿನಬೆಳಗಾಗುವ ಹೊತ್ತಿಗೆ ಇದೆ ಸುದ್ಧಿಗಳನ್ನು ಓದಿ ಅನುಕಂಪ ವ್ಯಕ್ತಪಡಿಸಬೇಕಾಗುತ್ತದೆ.



## ತುಂಗಭದ್ರಾ ನೀರಿನ ಮಟ್ಟ

ಮಂಗಳವಾರ : 27–05–2025

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1590.52 ಅಡಿ |
| ಒಳ ಹರಿವು | 2829 ಕ್ಯುಸೆಕ್ |
| ಹೊರ ಹರಿವು | 128 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 11.474 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |

ಕಳೆದ ವರ್ಷ ಇದೇ ದಿನ

| | |
|---|---|
| ಇಂದಿನ ಮಟ್ಟ | 1577.43 ಅಡಿ |
| ಒಳ ಹರಿವು | 0 ಕ್ಯುಸೆಕ್ |
| ಹೊರ ಹರಿವು | 0 ಕ್ಯುಸೆಕ್ |
| ಸಾಮರ್ಥ್ಯ | 3.349 ಟಿಎಂಸಿ |

## ನಿತ್ಯ ಪಂಚಾಂಗ

ಮಾಸ: ವೈಶಾಖ । ಸಂವತ್ಸರ: ವಿಶ್ವಾವಸು

**28–05–2025 – ಬುಧವಾರ**

| | |
|---|---|
| ತಿಥಿ | : ದ್ವಿತೀಯ |
| ಪಕ್ಷ | : ಶುಕ್ಲ |
| ನಕ್ಷತ್ರ | : ಮೃಗಶಿರ |
| ಯೋಗ | : ಧೃತಿ |
| ಕರಣ | : ಬಾಳವ |
| ಸೂರ್ಯೋದಯ | : 05:42:49 |
| ಸೂರ್ಯಾಸ್ತ | : 19:05:53 |
| ರಾಹು ಕಾಲ | : 12:24–14:05 |
| ಯಮಘಂಡ ಕಾಲ | : 07:23–09:04 |
| ಗುಳಿಕ ಕಾಲ | : 10:44–12:24 |

ಮೈಮೇಲೆ ಹರಿದ ಬಟ್ಟೆ
ಇದ್ದರೂ ಚಿಂತೆಯಿಲ್ಲ.
ಕೈಯಲ್ಲೊಂದು
ಕನ್ನಡ ದಿನಪತ್ರಿಕೆ ಇರಲಿ.
ಡಿ..ವಿ.ಜಿ.

# ಪೌರ ನೌಕರರಿಂದ ಪ್ರತಿಭಟನೆ ಸಾರ್ವಜನಿಕ ಸೇವೆ ಸ್ಥಗಿತ



■ **ಹಂಪಿ ಟೈಮ್ಸ್ ಮರಿಯಮ್ಮನಹಳ್ಳಿ**

ವಿವಿಧ ಬೇಡಿಕೆ ಈಡೇರಿಸುವಂತೆ ಒತ್ತಾಯಿಸಿ ಮಂಗಳವಾರ ಸ್ಥಳೀಯ ಪಟ್ಟಣ ಪಂಚಾಯಿತಿ ಕಚೇರಿ ಮುಂದೆ ಕರ್ನಾಟಕ ರಾಜ್ಯ ಪೌರ ನೌಕರರ ಸಂಘದ ನೇತೃತ್ವದಲ್ಲಿ ಮರಿಯಮ್ಮನಹಳ್ಳಿ ಶಾಖಾ ಪಟ್ಟಣ ಪಂಚಾಯಿತಿ ಕಚೇರಿಯಲ್ಲಿ ಕಾರ್ಯ ನಿರ್ಹವಹಿಸುತ್ತಿರುವ ಪೌರ ನೌಕರರು ಕಚೇರಿ ಇತರೆ ಕೆಲಸ ಕಾರ್ಯಗಳನ್ನು ಸ್ಥಗಿತಗೊಳಿಸಿ, ಕೈ ತೋಳಿಗೆ ಕಪ್ಪು ಬಟ್ಟೆ ಧರಿಸಿ ಅನಿರ್ದಿಷ್ಟಾವಧಿ ಮುಷ್ಕರದಲ್ಲಿ ಭಾಗವಹಿಸಿ ಪ್ರತಿಭಟನೆ ನಡೆಸಿದರು.

**ಪೌರ ನೌಕರರ ಬೇಡಿಕೆಗಳು:**

ಪೌರ ವೃಂದದ ನೌಕರರನ್ನು ಸರ್ಕಾರಿ ನೌಕರರಂದು ಪರಿಗಣಿಸಬೇಕು. ಕೆ.ಜಿ.ಆಯ್.ಡಿ, ಜಿ.ಪಿ.ಎಸ್ ಜ್ಯೋತಿ ಸಂಜೀವಿನಿ ಸೇರಿದಂತೆ ಸರ್ಕಾರಿ ನೌಕರರಿಗೆ ಸಿಗುವ ಇತರೆ ಸೌಲಭ್ಯಗಳನ್ನು ಪೌರ ನೌಕರರಿಗೂ ಜಾರಿ ಮಾಡಬೇಕು. ಹೊರಗುತ್ತಿಗೆ ಆಧಾರದ ಮೇಲೆ ಕಾರ್ಯ ನಿರ್ವಹಿಸುತ್ತಿರುವ ನೀರು ಸರಬರಾಜು ಸಿಬ್ಬಂದಿಗಳು, ಲೋಡರ್, ಕ್ಲೀನರ್, ಪೌರ ಕಾರ್ಮಿಕರು, ಸೂರ್ಸವೈಸರ್, ಕಂಪ್ಯೂಟರ್ ಆಪರೇಟರ್ ಸೇರಿದಂತೆ ಗುತ್ತಿಗೆ/ಹೊರಗುತ್ತಿಗೆ ಮೂಲಕ ಕಾರ್ಯ ನಿರ್ವಹಿಸುತ್ತಿರುವ ಜ್ಯೂನಿಯರ್ ಸಿಬ್ಬಂದಿಗಳಿಗೂ ನೇರ ವೇತನ ಪಾವತಿ ಮಾಡಿ, ಖಾಯಂ ಮಾಡಬೇಕು.

2022–23ನೇ ಸಾಲಿನಲ್ಲಿ ವಿಶೇಷ ನೇಮಕಾತಿ ಯಡಿನೇಮಕಾತಿಹೊಂದಿರುವಪೌರಕಾರ್ಮಿಕರು, ನೌಕರರಿಗೆ ಸ್ಥಳೀಯ ನಿಧಿ ಯಲ್ಲಿ ವೇತನ ನೀ ನೀಡುವುದನ್ನು ರದ್ದು ಪಡಿಸಿ, ಎಸ್.ಎಫ್.ಸಿ ಅನುದಾನದಡಿ ವೇತನ ಪಾವತಿ ಮಾಡಬೇಕು.

ಸರ್ಕಾರ ಈವರೆಗೂ ಪೌರನೌಕರರ ಬೇಡಿಕೆ ಈಡೇರಿಸಲು ಮುಂದೆ ಬಂದಿಲ್ಲ. ಈ ಹಿನ್ನೆಲೆಯಲ್ಲಿ ಮರಿಯಮ್ಮನಹಳ್ಳಿ ಪಟ್ಟಣ ಪಂಚಾಯಿತಿ ಪೌರನೌಕರರು ನೀರು ಸರಬರಾಜು ಹೊರತು ಪಡಿಸಿ, ಕಚೇರಿ ಕೆಲಸ, ಸ್ವಚ್ಛತಾ ಕಾರ್ಯ, ಹಾಗೂ ಬೀದಿ ದೀಪ ನಿರ್ವಹಣೆಯನ್ನು ಸ್ಥಗಿತಗೊಳಿಸಿ, ಪ್ರತಿಭಟನೆಯಲ್ಲಿ ತೊಡಗಿದ್ದರು.

ಕರ್ನಾಟಕ ರಾಜ್ಯ ಪೌರ ನೌಕರರ ಸಂಘದ ಮರಿಯಮ್ಮನಹಳ್ಳಿ ಪಟ್ಟಣ ಪಂಚಾಯಿತಿ ಶಾಖೆಯ ಅಧ್ಯಕ್ಷ ಸಿ. ಹನುಮಂತ, ಗೌರವಾಧ್ಯಕ್ಷ ಆದಿಮನಿ ಹೊನ್ನೂರ್ ಭಾಷ, ಉಪಾಧ್ಯಕ್ಷ ಎಚ್. ಚಿದಾನಂದ, ಪ್ರಧಾನ ಕಾರ್ಯದರ್ಶಿ ಎಚ್. ನಾಗವೇಣಿ, ಖಜಾಂಚಿ ಆರ್. ನಾಗರಾಜ, ಸಂಘದ ನಿರ್ದೇಶಕರಾದ ಎಸ್. ಅನಿಲ್ ಕುಮಾರ್, ಜಿ. ಹನುಮಂತ, ಸಂಘಟನಾ ಕಾರ್ಯದರ್ಶಿ ಎಚ್. ಎಂ. ಸಮಾದಪ್ಪ, ಸಹ ಸಂಘಟನಾ ಕಾರ್ಯದರ್ಶಿ ಟಿ. ಅನಿಲ್ ಕುಮಾರ್, ಸಂಘದ ಸದಸ್ಯರರು ಪ್ರತಿಭಟನೆಯಲ್ಲಿ ಭಾಗವ ಹಿಸಿದ್ದರು. ಪ.ಪಂ. ಅಧ್ಯಕ್ಷ ಆದಿಮನಿ ಹುಸೇನ್ ಭಾಷ ಸೇರಿದಂತೆ ಪ.ಪಂ. ಸದಸ್ಯರು, ಪ.ಪಂ. ಸಿಬ್ಬಂದ್ಧಿವರ್ಗದವರು ಪ್ರತಿಭಟನೆ ಬೆಂಬಲ ಸೂಚಿಸಿ ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.



ಹೊಸಪೇಟೆ ತಾಲೂಕಿನ ಕಮಲಾಪುರದಲ್ಲಿ ಮಂಗಳವಾರ ಪೌರಕಾರ್ಮಿಕರು ವಿವಿಧ ಬೇಡಿಕೆ ಈಡೇರಿಕೆಗೆ ಒತ್ತಾಯಿಸಿ ಕರ್ತವ್ಯಕ್ಕೆ ಗೈರಾಗಿ ಮುಷ್ಕರದಲ್ಲಿ ಭಾಗವಹಿಸಿದ್ದರು.



ಕೂಡ್ಲಿಗಿಯಲ್ಲಿ ಮಂಗಳವಾರ ಪೌರಕಾರ್ಮಿಕರು ವಿವಿಧ ಬೇಡಿಕೆ ಈಡೇರಿಕೆಗೆ ಒತ್ತಾಯಿಸಿ ಕರ್ತವ್ಯಕ್ಕೆ ಗೈರಾಗಿ ಮುಷ್ಕರದಲ್ಲಿ ಭಾಗವಹಿಸಿದ್ದರು.

## ದಾಖಲೆ ಸಕಾಲದೊಳಗೆ ವಿತರಿಸಿ

**ಮೊದಲ ಪುಟದಿಂದ**

ಜಿಲ್ಲಾಧಿಕಾರಿಗಳು ಮಾತನಾಡಿ, ಜನನ ಮತ್ತು ಮರಣ ಪ್ರಮಾಣ ಪತ್ರ ವಿತರಣೆಯಲ್ಲಿ ಸಾರ್ವಜನಿಕರನ್ನು ವಿನಾಃಕಾರಣ ಅಲೆದಾಡಿಸು ವಂತಿಲ್ಲ. ಮುಖ್ಯವಾಗಿ ಸುಳ್ಳು ಪ್ರಮಾಣ ಪತ್ರ ವಿತರಣೆ ಮಾಡುವಂತಿಲ್ಲ ಎಂದು ತಿಳಿಸಿದರು.

ಕೃಷಿ ಗಣತಿ ಕಾರ್ಯದಲ್ಲಿ ಸಹ ಈವರೆಗೆ ಜಿಲ್ಲೆಯಲ್ಲಿ ಬಿತ್ತನೆಯಾಗಿರುವುದು ಮತ್ತು ಬಿತ್ತನೆಯಾಗದಿರುವುದರ ಕುರಿತು ವಿವಿಧ ನಮೂನೆಗಳಲ್ಲಿ ಪ್ರಯೋಗದ ಮಾಹಿತಿಯನ್ನು ಆಯಾ ತಾಲ್ಲೂಕುಗಳ ತಹಶೀಲ್ದಾರರು ತಪ್ಪದೇ ನಮೂದಿಸಬೇಕು ಎಂದು ಎಲ್ಲಾ ತಾಲ್ಲೂಕು ತಹಶೀಲ್ದಾರರಿಗೆ ತಿಳಿಸಿದರು.ಸಭೆಯಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕ ವಿಜಯ್ ಕುಮಾರ್, ತೋಟಗಾರಿಕೆ ಇಲಾಖೆಯ ಉಪನಿರ್ದೇಶಕ ಸಂತೋಷ್ ಸಪ್ಪಂಡಿ, ಸಂಡೂರು ತಾಲ್ಲೂಕು ತಹಶೀಲ್ದಾರ ಅನೀಲ್ ಕುಮಾರ್ ಸೇರಿದಂತೆ ಕೃಷಿ, ಆರೋಗ್ಯ ಇಲಾಖೆಯ ಅಧಿಕಾರಿಗಳು ಮತ್ತು ಜಿಲ್ಲಾ ಮಟ್ಟದ ವಿವಿಧ ಇಲಾಖೆಯ ಅಧಿಕಾರಿಗಳು, ತಾಲ್ಲೂಕು ತಹಶೀಲ್ದಾರರು ಉಪಸ್ಥಿತರಿದ್ದರು.

**ಕರ್ನಾಟಕ ಸರ್ಕಾರ**
**ಸರ್ಕಾರಿ ಸಾರ್ವಜನಿಕ ಆಸ್ಪತ್ರೆ, ಹೂವಿನಹಡಗಲಿ–583219,**
ವಿಜಯನಗರ ಜಿಲ್ಲೆ

ಸಂಖ್ಯೆ/ಸ.ಸಾ.ಆ.ಹೂ.ಹ/**DHFWS46/2025-26/SE1018**
ದಿನಾಂಕ : **16.05.2025**

**ಇ–ಟೆಂಡರ್ ಪ್ರಕಟಣೆ**

2025–26ನೇ ಸಾಲಿಗಾಗಿ ಸರ್ಕಾರಿ ಸಾರ್ವಜನಿಕ ಆಸ್ಪತ್ರೆ, ಹೂವಿನಹಡಗಲಿ–583219 ವಿಜಯನಗರ ಜಿಲ್ಲೆ ಇಲ್ಲಿ 2025–26ನೇ ಸಾಲಿಗೆ ಗ್ರೂಪ್–ಡಿ ಮತ್ತು ನಾನ್ ಕ್ಲಿನಿಕಲ್ ಸೇವೆಯನ್ನು ಸರಬರಾಜು ಮಾಡಲು ಇ–ಪ್ರೋಕ್ಯೂರ್ಮೆಂಟ್ ಮೂಲಕ ದ್ವಿ–ಲಕೋಟೆ ಪದ್ಧತಿಯಲ್ಲಿ ಇ–ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಇಚ್ಛೆಯುಳ್ಳ ಹಾಗೂ ಅರ್ಹವುಳ್ಳ ಟೆಂಡರುದಾರರು ನಿಗದಿತ ಸಮಯದೊಳಗೆ ಇ–ಪ್ರೋಕ್ಯೂರ್ಮೆಂಟ್ ವೇದಿಕೆ ಮೂಲಕ ಟೆಂಡರುಗಳನ್ನು ಸಲ್ಲಿಸಲು ಕೋರಿದೆ.

Group-D & Non clinical -Tender No. **GHH/TENDER/DHFWS46/2024-25/SE1018.** Group-D & Non clinical -Tender No e-Tender No. **DHFWS/2025-26/SE1018.** Commencement of downloading of e-tender forms from website **http://eproc.karnataka.gov.in** ದಿನಾಂಕ:17.05.2025 ರಿಂದ **16.06.2025** ರಂದು ಸಂಜೆ **4.00** ಗಂಟೆಯವರೆಗೆ. Last date for uploading of Tender in e-procurement platform **ದಿನಾಂಕ: 16.06.2025 ರಂದು ಸಂಜೆ 4.30 ಗಂಟೆಯವರೆಗೆ.** Date, Time & Venue of Opening of Tenders **ದಿನಾಂಕ: 17.06.2025 ರಂದು ಸಂಜೆ 4.30 ಗಂಟೆಗೆ, ಆಡಳಿತ ವೈದ್ಯಾಧಿಕಾರಿಗಳು, ಸರ್ಕಾರಿ ಸಾರ್ವಜನಿಕ ಆಸ್ಪತ್ರೆ, ಹೂವಿನಹಡಗಲಿ–583219, ವಿಜಯನಗರ ಜಿಲ್ಲೆ ಇವರ ಕಛೇರಿಯಲ್ಲಿ ಇ–ಪ್ರೋಕ್ಯೂರ್ಮೆಂಟ್ ವೇದಿಕೆ ಮೂಲಕ ತೆರೆಯಲಾಗುವುದು.** EMD for supply of Group-D & Non clinical **Rs.47500./-**

ಇ–ಪ್ರೋಕ್ಯೂರ್ಮೆಂಟ್‌ನಲ್ಲಿ ನೋಂದಾಯಿಸಿದ ಟೆಂಡರ್‌ದಾರರು ಟೆಂಡರ್ ಪ್ರೊಸೆಸಿಂಗ್ ಶುಲ್ಕ, ಇ.ಎಂ.ಡಿ, ಟೆಂಡರು ಫಾರಂ ಇತ್ಯಾದಿ ವಿವರಗಳಿಗೆ ಕರ್ನಾಟಕ ಸರ್ಕಾರದ ಇ–ಪ್ರೋಕ್ಯೂರ್ಮೆಂಟ್ ಪೋರ್ಟಲ್ ವೆಬ್‌ಸೈಟ್ **http://eproc.karnataka.gov.in** ಮೂಲಕ ಮಾಹಿತಿ ಪಡೆಯಬಹುದು ಅಥವಾ ಕಛೇರಿಯ ಸಮಯದಲ್ಲಿ ಈ ಕೆಳಗೆ ಸಹಿ ಮಾಡಿದವರನ್ನು ಸಂಪರ್ಕಿಸಲು ಕೋರಲಾಗಿದೆ.

**ಸಹಿ/–ಆಡಳಿತ ವೈದ್ಯಾಧಿಕಾರಿಗಳು ಸರ್ಕಾರಿ ಸಾರ್ವಜನಿಕ ಆಸ್ಪತ್ರೆ**
**ಹೂವಿನಹಡಗಲಿ–583219, ವಿಜಯನಗರ ಜಿಲ್ಲೆ**

ವಾ.ಸಾ.ಸಂ.ಇ/ವಿಜಯನಗರ/2025–26/ಕೆಎಸ್‌ಎಂಸಿಎ/ಆರ್.ಓ.ಸಂಖ್ಯೆ/71

ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ
ಕನ್ನಡ ದಿನ ಪತ್ರಿಕೆ
HAMPI TIMES
Print & Digital Kannada Daily

ಪರಿಸರ ಬೆಳೆಸಿ ಮಕ್ಕಳ ಭವಿಷ್ಯಕ್ಕೆ ಬೆಳಕಾಗಿ

ಪರಿಸರ ಉಳಿಸಿ ಬೆಳೆಸೋಣ ಅಭಿಯಾನಕ್ಕೆ ಪಾಲಕರು ಕೈಜೋಡಿಸಿ, ಭವಿಷ್ಯದ ಮಕ್ಕಳಿಗೆ ಉತ್ತಮ ಆರೋಗ್ಯ ನೀಡಿ

ಶಾಲೆ ಪ್ರವೇಶಿಸುವ ನಿಮ್ಮ ಮಗುವಿನ ಹೆಸರಿನಲ್ಲೊಂದು ಸಸಿ ನೆಡಿಸಿ,
ಹಂಪಿ ಟೈಮ್ಸ್ ಗೆ ಫೋಟೋ ಕಳುಹಿಸಿ...



ನೂತನವಾಗಿ ಶಾಲೆ ಪ್ರವೇಶಿಸುತ್ತಿರುವ ಮಗುವಿನಿಂದ ಒಂದು ಸಸಿ ನೆಡಿಸಿ. ಆ ಸಸಿಗೆ ಆ ಮಗುವಿನ ಹೆಸರನ್ನೇ ನಾಮಕರಣ ಮಾಡಿ, ಆ ಮಧುರಕ್ಷಣವನ್ನು ಕ್ಯಾಮರಾದಲ್ಲಿ ಸೆರೆಹಿಡಿದು, ಮಗುವಿನ ಮತ್ತು ಸಸಿಯ ಹೆಸರು, ಶಾಲೆಯ ಹೆಸರು, ಊರು, ಜಿಲ್ಲೆ ನಮೂದಿಸಿ ಕಳುಹಿಸಿಕೊಡಿ.
ಆಯ್ದ ಫೋಟೋಗಳನ್ನು
**ಹಂಪಿ ಟೈಮ್ಸ್‌ನಲ್ಲಿ ಪ್ರಕಟಿಸಲಾಗುವುದು.**



SCAN & READ
HAMPI TIMES E-PAPER

ಫೋಟೋಗಳನ್ನು ಈ ಕೆಳಗಿನ ಇಮೇಲ್/ವಾಟ್ಸಪ್ ನಂಬರಿಗೆ ಸಸಿ ನೆಟ್ಟ ದಿನವೇ ಕಳುಹಿಸಿ
www.hampitimes.com / https://epaper.hampitimes.com
Email: hampitimes@gmail.com
Contact for Advertisement place : 94486 33038